₹ 5/-

# ನೇಸರು

## ತಿಂಗಳೋಲೆ

PAGES 20

MARCH 2023 Nesaru Tingalole Vol. XLI - 03



**ಹಸಿರು ಹಸಿರಾಗಿ ಯುಗಾದಿ ಬರುತಿದೆ**

**ಸವಿ ಕಹಿಯಾಗಿ ಬೇವು ಬೆಲ್ಲ ತರುತಿದೆ**

**ಮೈಸೂರು ಅಸೋಸಿಯೇಷನ್ ಮುಂಬೈ**

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಶಿವರಾತ್ರಿಯಲ್ಲಿ ಧ್ಯಾನ



ಫೆಬ್ರುವರಿ 18, 2023 ರಂದು ಮಹಾಶಿವ ರಾತ್ರಿಯಲ್ಲಿ ಶಿವನ ಆರಾಧನೆಯಲ್ಲಿ, ಸದಸ್ಯರು ತೊಡಗಿದರು. ವೈದಿಕ ಆರಾಧನೆಯ ನಂತರ ಸಂಗೀತಾರಾಧನೆ ನಡೆಯಿತು. "ಶಿವ" ಎಂದರೆ "ಶುಭ" ಎಂದೇ ಅರ್ಥ. ಅವನು ನಿರಾಕಾರ, ನಿಸ್ವರೂಪ, ನಿರ್ಗುಣ. ಅವನು ಕಾಮನನ್ನು ತೊಡೆದು ಹಾಕಿದವನು ಎಂದರೆ ಆಸೆಯನ್ನೇ ನಿರ್ಮೂಲ ಮಾಡಿದವನು. ಆಸೆಯೇ ನಮ್ಮ ಜಗತ್ತಿನ ಎಲ್ಲಾ ವಿಕಾರಕ್ಕೂ ಕಾರಣ. "ನನಗೆ ಹೆಚ್ಚಿನ ಸಂಪತ್ತು ಬೇಕು, ನನಗೆ ಹೆಚ್ಚಿನ ನೆಲ ಬೇಕು, ನನ್ನ ಮಾತನ್ನು ಇತರರು ಕೇಳಬೇಕು, ನನ್ನನ್ನು ಮೆಚ್ಚಬೇಕು" ಎಂದಾಗ, ನಮ್ಮೆಲ್ಲ ತಾಪಗಳಿಗೆ ನಾವು ಬಲಿಯಾಗುತ್ತೇವೆ. ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಕಲಹಗಳೆಲ್ಲ ಇಂತಹ ಆಸೆಯಿಂದಲೇ ಹುಟ್ಟಿದವು. ಉಕ್ರೇನ್ ನಲ್ಲಿ ಉಕ್ಕುತ್ತಿರುವ ಕದನ, ಶ್ರಿಲಂಕಾ–ಬ್ರಿಟನ್ ಪಾಕಿಸ್ತಾನಗಳಲ್ಲಿ ನಡೆಯುತ್ತಿರುವ ಬಡತನ, ಬೇರೆ ಬೇರೆ ದೇಶಗಳಲ್ಲಿ ನಡೆಯುತ್ತಿರುವ ಅಧಿಕಾರಕ್ಕೆ ಜಗಳ ಎಲ್ಲವೂ ಈ ಆಸೆಯಿಂದಲೇ ಹುಟ್ಟಿದವು.

ನನ್ನ ಮಗನಿಗೆ, ಪರಿವಾರಕ್ಕೆ ಮುಂದಿನ ಪಟ್ಟ ಬರಬೇಕು ಎಂದು ಎಲ್ಲರೂ ಆಸೆಯಿಂದ ಪಾರ್ಟಿಗಳನ್ನು ಕಟ್ಟಿರುವುದು ಈ ಆಸೆಯಿಂದಲೇ.ಅದಕ್ಕಾಗಿ ಶಿವನ ಮತ್ತು ಅವನ ಮೂರನೆಯ ಕಣ್ಣಿನ ಆದರ್ಶ. ಎಲ್ಲರಿಗೂ ಎರಡು ಕಣ್ಣಿರುತ್ತದೆ, ದಿಟ. ಆದರೆ ಈ ಕಣ್ಣುಗಳಿಂದ ತೋರುವುದೆಲ್ಲಾ ದಿಟವಲ್ಲ. ಜ್ಞಾನವೆಂಬ ಮೂರನೆಯ ಕಣ್ಣನ್ನು ತೆರೆದು ನೋಡಿದಾಗ, ಎಲ್ಲವೂ ಒಂದೇ ಶಕ್ತಿಯಾಗಿ ತೋರುತ್ತವೆ. "ನಾನು–ತಾನು–ಅವನು" ಎಂಬುದೇ ಇಲ್ಲ. ಬಡಿದಾಟಗಳೂ ಇಲ್ಲ.

ಶಿವನ ಹಣೆಯಲ್ಲಿ ಮೂರನೆಯ ಕಣ್ಣು, ಕಾಲಡಿಯಲ್ಲಿ ಅಂಧಕಾಸುರ. ಅಂದರೆ ಅಜ್ಞಾನವನ್ನು ತುಳಿದು ಹಾಕುತ್ತಿರುವವನು ಎಂದು.

ಈ ಆದರ್ಶದತ್ತ ಮತ್ತೆ ಮತ್ತೆ ನಮ್ಮ ನೋಟ ಹರಿಯಲಿ ಎಂದು ಮಹಾಶಿವರಾತ್ರಿಯ ಆಚರಣೆಯನ್ನು ನಾವು ಮಾಡುತ್ತೇವೆ.

**ಓಂ ನಮಃ ಶಿವಾಯ**

## ಅಸೋಸಿಯೇಷನ್ನಿನಲ್ಲಿ ಮುಂಬರುವ ಕಾರ್ಯಕ್ರಮಗಳು

**The Mysore Association, Bombay**

*celebrates*

**98th Foundation Day**

*On Saturday, 04th March 2023*

*6.30 p.m. onwards*

**Variety Entertainment Programme**

**Followed by Dinner**

All are requested to join this joyous celebration

**Venue :** Mysore Association Hall,

393, Bahu Daji Road, Matunga, Mumbai - 400 019

Hon. Secretary

**Dr. Ganpati Shankarling**



**ಮಾರ್ಚ್ 30, 2023**

**ಸಂಜೆ 6.30**

**ರಾಮ ನವಮಿ**

**ಪ್ರಯುಕ್ತ**

**ವಿಶೇಷ ಪೂಜೆ**



**ಏಪ್ರಿಲ್ 22, 2023**

**ಸಂಜೆ 6.30**

**ಅಕ್ಷಯ ತೃತೀಯಾ**

**ವಿಶೇಷ ಪೂಜೆ**

**ಏಪ್ರಿಲ್ 29, 2023**

**ಸಂಜೆ 6.00**

**ಅಸೋಸಿಯೇಷನ್ನಿನ ನಾಟಕ ಬರೆಯುವ**

**ಸ್ಪರ್ಧೆಯ ವಿಜೇತರಿಗೆ**

**ಬಹುಮಾನ ವಿತರಣಾ ಕಾರ್ಯಕ್ರಮ**

**(ವಿವರಗಳನ್ನು ನಿರೀಕ್ಷಿಸಿ)**

ಗೌ. ಸಂಪಾದಕರು
ಡಾ. ಜ್ಯೋತಿ ಸತೀಶ್
***

ಸಂಪಾದಕ ಮಂಡಳಿ:
ಡಾ. ಮಂಜುನಾಥ್
ಕೆ. ಮಂಜುನಾಥಯ್ಯ
ನಾರಾಯಣ ನವಿಲೇಕರ್
ಗಣಪತಿ ಶಂಕರಲಿಂಗ
ನೀಲಕಂಠ
***

ಬೆಂಗಳೂರು ಪ್ರತಿನಿಧಿ
ಎಂ. ಎ. ಎನ್. ಪ್ರಸಾದ್
***

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.
****

ಸಂಪರ್ಕ ವಿಳಾಸ:
ನೇಸರು
ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ
ಮುಂಬಯಿ – 400 019.
✆ 24037065
Email:
Mysoreassociation.mumbai@gmail.com
Website:
www.mysoreassociation.in

ನೇಸರು ತಿಂಗಳೋಲೆ
ಸಂಪುಟ 41 ಮಾರ್ಚ್–2023 ಸಂಚಿಕೆ 03

# ಮಾನಸಿಕ ನೆಮ್ಮದಿ



**✍ ಡಾ. ಜ್ಯೋತಿ ಸತೀಶ್**

ಮನುಷ್ಯನಿಗೆ ಬದುಕಲಿಕ್ಕೆ ಮುಖ್ಯವಾಗಿ ಏನೇನು ಬೇಕು? ಎನ್ನುವುದರ ಬಗ್ಗೆ ಚಿಂತನೆ ಮಾಡಿದಾಗ, ಇವತ್ತಿನ ಕಾಲದಲ್ಲಿ ಎಲ್ಲವೂ ಮುಖ್ಯವಾಗಿ ಬೇಕೆನಿಸುತ್ತದೆ. ನಾವೆಲ್ಲರೂ ಒಂದಲ್ಲ ಒಂದು ಕಾರಣದಿಂದ ಯಾವುದ್ಯಾವುದರ ಹಿಂದೆ ಓಡುತ್ತಿರುತ್ತೇವೆ. ಇವತ್ತಿನ ಕಾಲದಲ್ಲಿ ನಾವು ಸಂಬಂಧಗಳಿಗಿಂತ, ಹಣಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಿದ್ದೇವೆ. ದೊಡ್ಡ ದೊಡ್ಡ ಅಪೇಕ್ಷೆಗಳ ಕಟ್ಟಿಕೊಂಡು ಒದ್ದಾಟ ಮಾಡುತ್ತಿದ್ದೇವೆ. ಅದು ಈಡೇರದಾಗ ಬದುಕಿನಲ್ಲಿ ಹತಾಶರಾಗಿ ಬಿಡುತ್ತೇವೆ. 'ಚಿಂತೆ ಇಲ್ಲದವನಿಗೆ ಸಂತೆಯಲ್ಲೂ ನಿದ್ದೆ' ಅಂತ ಹೇಳುತ್ತಾರೆ. ನಾವು ಭವಿಷ್ಯದ ಬಗ್ಗೆ ಯೋಚಿಸುತ್ತಾ, ಇವತ್ತಿನ ದಿನವನ್ನು ವ್ಯರ್ಥ ಮಾಡುತ್ತಿದ್ದೇವೆ. ಈ ಸಂದರ್ಭದಲ್ಲಿ ನನಗೆ ಎಲ್ಲೋ ಓದಿದ ಒಂದು ಕಥೆ ನೆನಪಾಗುತ್ತದೆ.

ಒಬ್ಬ ಶ್ರೀಮಂತ ವ್ಯಕ್ತಿ ಇದ್ದ. ಅವನಲ್ಲಿ ಎಲ್ಲವೂ ಇದೆ. ಕಾರು, ಬಂಗಲೆ, ಹಣ ಎಲ್ಲವೂ ಇದ್ದರೂ ಅವನ ಮನಸ್ಸಿಗೆ ಶಾಂತಿ ಅನ್ನೋದು ಇಲ್ಲ. ನೆಮ್ಮದಿಯ ಹುಡುಕಾಟ ಮಾಡುತ್ತಿರುವಾಗ, ಒಬ್ಬ ಸಾಧುವನ್ನು ಭೇಟಿಯಾಗುತ್ತಾನೆ. "ನನ್ನಲ್ಲಿ ಎಲ್ಲವೂ ಇದೆ. ನಾನು ಇಷ್ಟೆಲ್ಲ ಸಂಪಾದಿಸಿದ ಮೇಲೆ, ನನಗೆ ಶಾಂತಿ ದೊರೆಯುತ್ತದೆ ಅಂತ ನಾನು ಅಂದುಕೊಂಡಿದ್ದೆ. ಆದರೆ ಇಷ್ಟು ಶ್ರೀಮಂತನಾದರೂ ನನಗೆ ನೆಮ್ಮದಿ ಇಲ್ಲ. ನೀವೇ ನನಗೆ ದಾರಿ ತೋರಿಸಿಕೊಡಬೇಕು" ಎಂದು ಸಾಧುವಿನಲ್ಲಿ ಕೇಳಿಕೊಳ್ಳುತ್ತಾನೆ. ಆಗ ಸಾಧು ತನ್ನ ಕೋಣೆಯಲ್ಲಿದ್ದ ಮೂರು ಚೆಂಡುಗಳನ್ನು ತರುತ್ತಾನೆ. ಒಂದು ಗಾಜಿನಿಂದ ಮಾಡಿದ ಚೆಂಡು, ಇನ್ನೊಂದು ಮಣ್ಣಿನ ಚೆಂಡು ಮತ್ತೊಂದು ರಬ್ಬರ್ ನಿಂದ ಮಾಡಿದ ಚೆಂಡು. ಆ ಮೂರು ಚೆಂಡುಗಳನ್ನು ಆ ಶ್ರೀಮಂತ ವ್ಯಕ್ತಿಯ ಕೈಗೆ ಕೊಡುತ್ತಾ, "ನಾನು ನಿನ್ನ ಸಮಸ್ಯೆಗ ಪರಿಹಾರವನ್ನು ಹೇಳುತ್ತೇನೆ. ಆದರೆ ಅದಕ್ಕೂ ಮೊದಲು ನಾನು ನಿನಗೆ ಒಂದು ಕೆಲಸವನ್ನು ನೀಡುತ್ತೇನೆ. ಈ ಚೆಂಡನ್ನು ತೆಗೆದುಕೊಂಡು ಅವುಗಳನ್ನು ಒಂದರ ನಂತರ ಒಂದರಂತೆ ಟಾಸ್ ಮಾಡು. ಒಂದು ಸಮಯದಲ್ಲಿ ಕನಿಷ್ಠ ಒಂದು ಚೆಂಡು ಗಾಳಿಯಲ್ಲಿ ಉಳಿಯುವಂತೆ ನೋಡಿಕೋ" ಎಂದು ಹೇಳುತ್ತಾನೆ. ಆಗ ಆ ಶ್ರೀಮಂತ ವ್ಯಕ್ತಿ, ಆ ಚೆಂಡುಗಳನ್ನು ಗಾಳಿಯಲ್ಲಿ ಎಸೆಯಲು ಪ್ರಾರಂಭಿಸಿದನು. ಅವನು ಒಂದು ಚೆಂಡನ್ನು ಗಾಳಿಯಲ್ಲಿ ಎಸೆದರೆ, ಎರಡು ಚೆಂಡುಗಳು ಅವನ ಕೈಯಲ್ಲಿ ಉಳಿಯುತ್ತವೆ. ಗಾಳಿಯಲ್ಲಿ ಎಸೆದ ಚೆಂಡು ಕೆಳಗೆ ಬೀಳುವ ಹಂತದಲ್ಲಿದ್ದಾಗ, ಅವನು ತನ್ನು ಕೈಯಲ್ಲಿದ್ದ ಚೆಂಡನ್ನು ಟಾಸ್ ಮಾಡುವ ಮೂಲಕ ಆ ಚೆಂಡನ್ನು ಹಿಡಿಯುತ್ತಾನೆ. ಇದು ಹೀಗೆ ನಡೆಯುತ್ತಲೇ ಇತ್ತು. ಸ್ವಲ್ಪ ಸಮಯದ ನಂತರ ಮಣ್ಣಿನ ಚೆಂಡು ಗಾಳಿಯಲ್ಲಿದ್ದಾಗ, ಗಾಜು ಮತ್ತು ರಬ್ಬರ್ ಚೆಂಡುಗಳು ಅವನ ಕೈಯಲ್ಲಿದ್ದಾಗ, ಆ ಶ್ರೀಮಂತ ವ್ಯಕ್ತಿಗೆ ತನ್ನ ಸಮತೋಲನವನ್ನು ಕಾಪಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಮತ್ತು ಮಣ್ಣಿನ ಚೆಂಡು ನೆಲದ ಮೇಲೆ ಬೀಳಲು ಪ್ರಾರಂಭಿಸಿತು. ಇದನ್ನು ನೋಡಿದ ಶ್ರೀಮಂತ, ತಕ್ಷಣವೇ ತನ್ನ ಕೈಯಿಂದ ರಬ್ಬರ್ ಚೆಂಡನ್ನು ಕೆಳಗೆ ಬಿಟ್ಟು ಬಿಡುತ್ತಾ, ಮಣ್ಣಿನ ಚೆಂಡನ್ನು ಕೈಯಲ್ಲಿ ಹಿಡಿಯುತ್ತಾನೆ. ಅದಕ್ಕೆ ಸಾಧು, "ಮಗು, ನೀನು ರಬ್ಬರ್ ಚೆಂಡನ್ನು ಏಕೆ ಬೀಳಿಸಿದಿ? ಮಣ್ಣಿನ ಚೆಂಡನ್ನು ಏಕೆ ನೆಲಕ್ಕೆ ಬೀಳಲು ಬಿಡಲಿಲ್ಲ?" ಅದಕ್ಕೆ ಶ್ರೀಮಂತ ವ್ಯಕ್ತಿ ಉತ್ತರಿಸುತ್ತಾ, "ಗಾಜಿನ ಅಥವಾ ಮಣ್ಣಿನ ಚೆಂಡು ನೆಲದ ಮೇಲೆ ಬಿದ್ದರೆ, ಅದು ಒಡೆಯುತ್ತದೆ. ಆದರೆ ರಬ್ಬರ್ ಚೆಂಡು ಕೆಳಗೆ ಬಿದ್ದರೆ ಯಾವುದೇ ಹಾನಿ ಇಲ್ಲ. ಆದ್ದರಿಂದ ಒಂದೇ ಸಮಯಕ್ಕೆ ನಾನು ಎರಡು ಚೆಂಡುಗಳನ್ನು ಮಾತ್ರ ನಿಭಾಯಿಸಬಲ್ಲೆ ಎನ್ನುವುದು ನನ್ನ ಅರಿವಿಗೆ ಬಂದಾಗ, ರಬ್ಬರ್ ಚೆಂಡನ್ನು ಕೆಳಗೆ ಬೀಳಿಸಿದೆ". ಅದಕ್ಕೆ ಸಾಧು, "ನೀನು ಯಾವ ಸಮಸ್ಯೆಗೆ ನನ್ನ ಬಳಿಗೆ ಬಂದಿದ್ದೀರೋ ಆ ಸಮಸ್ಯೆಗೆ ನೀವೇ ಪರಿಹಾರ ಕಂಡುಕೊಂಡಿದ್ದೀರಿ. ಈಗ ಎಚ್ಚರಿಕೆಯಿಂದ ಆಲಿಸಿ ನನ್ನ ಮಾತುಗಳನ್ನು, ಈ ಮೂರು ಚೆಂಡುಗಳು ನಿಮ್ಮ ಜೀವನದ ಆದ್ಯತೆಗಳನ್ನು ಪ್ರತಿನಿಧಿಸುತ್ತದೆ. ಮಣ್ಣಿನ ಚೆಂಡು ನೀನು ಮತ್ತು ನಿನ್ನ ಕುಟುಂಬವನ್ನು ಪ್ರತಿನಿಧಿಸುತ್ತದೆ. ಗಾಜಿನ ಚೆಂಡು ನಿನ್ನ ಕೆಲಸ, ವ್ಯವಹಾರ, ಹಣ ಮತ್ತು ಜೀವನದ ಅಗತ್ಯ ಸಾಧನಗಳನ್ನು ಪ್ರತಿನಿಧಿಸುತ್ತದೆ. ರಬ್ಬರ್ ಚೆಂಡು ಐಷಾರಾಮಿ ವಸ್ತುಗಳನ್ನು ಅಂದರೆ ಯಾವ ವಸ್ತುಗಳಿಲ್ಲದೆ ಜೀವನವನ್ನು ಆರಾಮವಾಗಿ ಕಳೆಯಬಹುದು ಅಂತಹ ವಸ್ತುಗಳು. ನೀನು ನಿನ್ನ ಜೀವನದಲ್ಲಿ ಗಾಜಿನ ಚೆಂಡು ಮತ್ತು ರಬ್ಬರ್ ಚೆಂಡಿನ ಮೇಲೆ ನಿಮ್ಮ ಎಲ್ಲ ಗಮನವನ್ನು ಕೇಂದ್ರೀಕರಿಸಿದ್ದೀರಿ. ಅಂದರೆ ದುಬಾರಿ ಮನೆ, ಕಾರು, ಬಂಗಲೆ. ನಿಮ್ಮ ಕುಟುಂಬದ ಬಗ್ಗೆ ನೀವು ಗಮನ ಕೊಡಲೇ ಇಲ್ಲ. ಅದಕ್ಕೆ ನೀನು ಜೀವನದಲ್ಲಿ ಸಂತೋಷ ಮತ್ತು ಶಾಂತಿಯನ್ನು ಕಳೆದುಕೊಳ್ಳಲು ಇದೇ ಕಾರಣ" ಎಂದು ಸಾಧುಗಳು ಹೇಳುತ್ತಾರೆ. "ಇನ್ನು ನಿನ್ನ ಮುಂದಿನ ಜೀವನದಲ್ಲಿ ಮೊದಲು ಆದ್ಯತೆಯನ್ನು ಗಟ್ಟಿಮಾಡಿಕೊಳ್ಳು. ಜೀವನದ ಮೂರು ಚೆಂಡುಗಳ ಸಮತೋಲನವು ಹದಗೆಡುತ್ತಿದೆ ಎಂದು ನಿಮ್ಮ ಗಮನಕ್ಕೆ ಬಂದರೆ, ರಬ್ಬರ್ ಚೆಂಡನ್ನು ಬಿಟ್ಟುಬಿಡಿ. ಆಗ ನಿಮ್ಮ ಜೀವನದಲ್ಲಿ ಸಂತೋಷವು ಯಾವಾಗಲೂ ಉಳಿಯುತ್ತದೆ" ಎಂದು ಸಾಧುಗಳು ನುಡಿಯುತ್ತಾರೆ.

ಇದು ಅಕ್ಷರಶಃ ನಿಜ. ನಾವು ಕೆಲಸ ಮತ್ತು ಹಣದ ಹಿಂದೆ ಓಡುತ್ತಿರುವಾಗ, ನಮಗಾಗಿ ಮತ್ತು ನಮ್ಮ ಪ್ರೀತಿಪಾತ್ರರಿಗಾಗಿ ಸಮಯವನ್ನು ಕಳೆಯಲು ನಮಗೆ ಸಾಧ್ಯವಾಗುವುದಿಲ್ಲ ಮತ್ತು ನಾವು ಸಂತೋಷ ಮತ್ತು ಶಾಂತಿಗಾಗಿ ಹಾತೊರೆಯುತ್ತಿರುವುದಕ್ಕೆ ಇದೇ ಕಾರಣ ಅನಿಸುತ್ತದೆ. ಅಲ್ಲವೇ?

(ಕಳೆದ ಸಂಚಿಕೆಯಿಂದ)

# ಹೀಗಿತ್ತು ಮಲೆನಾಡು



✍ ಜಿ.ವಿ.ನವಿಲೇಕರ್

(ಈ ದೀರ್ಘ ಲೇಖನವು ಕೊಳವಳ್ಳಿ ಪ್ರಕಾಶನ ಪ್ರಕಟಿಸಿರುವ "ನನ್ನೊಳಗಿನ ಮಲೆನಾಡು "ಪುಸ್ತಕದಲ್ಲಿ ಪ್ರಕಟವಾಗಿದೆ)

**ಮನರಂಜನೆ- ಯಕ್ಷಗಾನ ಮೇಳ:** ಆಗಿನ ಮಲೆನಾಡಿನಲ್ಲಿ ಮನರಂಜನೆಗೆ ಸಿನಿಮಾ ನಾಟಕ ಮುಂತಾಗಿ ಇರಲಿಲ್ಲ. ಹಳ್ಳಿಮನೆಗಳಲ್ಲಿ ಕೆಲವರು ಗದುಗಿನ ಭಾರತ, ರಾಮಾಯಣ ಮುಂತಾದವುಗಳನ್ನು ಗಮಕ ರೂಪದಲ್ಲಿ ಹೇಳುತ್ತಿದ್ದರು ಮತ್ತು ಇದಕ್ಕೆ ಅರ್ಥ ಹೇಳುವವರೂ ಇದ್ದರು. ಹಗಲಿನ ಕೆಲಸ ಕಾರ್ಯಗಳನ್ನು ಪೂರೈಸಿ ಸಾಯಂಕಾಲ ಇಂತಹ ಗಮಕಿಗಳ ಮನೆಯಲ್ಲಿ ಸೇರಿ ರಾಮಾಯಣ, ಮಹಾಭಾರತ ಕಥೆ ಕೇಳುವುದು, ತಾಳಮದ್ದಲೆ ಇದ್ದ ಮನೆಗಳಲ್ಲಿ ತಾಳಮದ್ದಲೆ ಕೇಳುವುದು, ಹರಿಕಥೆಯವರು ಬಂದಲ್ಲಿ ಹರಿಕಥೆ ಮಾಡಿಸುವುದು, ನೆಂಟರಿಷ್ಟರಲ್ಲಿ ಲಗ್ನ ವಗೈರೆ ಸಮಾರಂಭಗಳಾದರೆ ಹೊತ್ತು ಕಳೆಯಲು ಸಂತೋಷವಾಗಿ ಇಸ್ಪೀಟ್ ಆಡುವುದು, ವಾರ್ಷಿಕ ರಥೋತ್ಸವಗಳಲ್ಲಿ ಹಳ್ಳಿಯವರೆಲ್ಲಾ ಭಾಗಿಗಳಾಗುವುದು, ವಾರ್ಷಿಕವಾಗಿ ಬರುವ ಹಬ್ಬಗಳನ್ನು ಆನಂದದಿಂದ ಆಚರಿಸುವುದು ಮುಂತಾಗಿ ಮಲೆನಾಡಿನಲ್ಲಿ ಅಂದಿನ ಮನರಂಜನೆಗಳಿದ್ದವು.

ಮಲೆನಾಡಿನ ಹಿಂದಿನ ಅವಿಭಕ್ತ ಕುಟುಂಬಗಳ ಹಬ್ಬದ ಅನುಭವಗಳನ್ನು ಕೇಳುವುದೇ ಆನಂದದಾಯಕವಾಗಿರುತ್ತದೆ. ಮಲೆನಾಡಿನಲ್ಲಿ ಅವಿಭಕ್ತ ಕುಟುಂಬಗಳು ಈಗ ತುಂಬಾ ಅಪರೂಪವಾಗಿವೆ. ಇಲ್ಲವೆಂದೂ ಸಹ ಹೇಳಬಹುದು. ನಾಗರೀಕತೆ, ಬದುಕಿನ ಒತ್ತಡಗಳಿಂದ ನೂರಾರು ಸಾವಿರಾರು ಉದ್ಯೋಗಗಳು ಸೃಷ್ಟಿಯಾಗಿ ಬದುಕಿಗಾಶ್ರಯವಾದ ಉದ್ಯೋಗಗಳಿಂದ ಪ್ರಪಂಚದ ಎಲ್ಲ ಕಡೆಗಳಲ್ಲಿಯೂ ಭಾರತೀಯರು ವಲಸೆ ಹೋಗಿರುವುದನ್ನು ನೋಡಬಹುದು. ಹೀಗಾಗಿ ಕುಟುಂಬದ ಸದಸ್ಯರ ಅಭಾವದಿಂದ ಈಗ ದೀಪಾವಳಿ ಹಬ್ಬ ನೀರಸವಾಗುತ್ತಲೂ ಬಂದಿದೆ ಹಾಗೂ ಪೂರ್ವದ ಗೋಸಂಪತಾಗಲೀ ವ್ಯವಸಾಯದ ಆಸಕ್ತಿ ಆಕರ್ಷಣೆಗಳಾಗಲೀ ಈಗ ತುಂಬಾ ಕಡಿಮೆಯಾಗಿವೆ. ಈ ಕಾಲಘಟ್ಟದಲ್ಲಿ ಸಂಭ್ರಮಗಳೆಲ್ಲ ಮರೆಯಾಗುತ್ತಾ ಬಂದಿದ್ದರೂ ಹಾಲಿ ವಯೋವೃದ್ಧರಾಗಿರುವವರು ಆಕಾಲದ ಹಬ್ಬಗಳ ಸಂಭ್ರಮಗಳನ್ನು ಹೇಳುವಾಗ ಅದನ್ನು ಕೇಳುವುದೇ ತುಂಬಾ ಹರ್ಷದಾಯಕ ವಿಷಯವಾಗಿದೆ.

ಹಿಂದೆ ಮಲೆನಾಡಿನಲ್ಲಿ ಅಡಿಕೆ ಕೊಯ್ಲು, ಗದ್ದೆ ಕೊಯ್ಲು ಪೂರೈಸಿದ ನಂತರ ರೈತರಿಗೆ ಆರಾಮಾಗಿರಲು ಸಮಯವಿರುತ್ತಿತ್ತು. ಆದರೆ ಅವರಿಗೆ ಬಿಡುವಿನ ಕಾಲದಲ್ಲಿ ಮನರಂಜನೆಗೆ ಸಿನಿಮಾ- ನಾಟಕಗಳು ಇಲ್ಲದಿದ್ದ ಕಾಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರತಿಯೊಂದು ಊರಿನಲ್ಲಿಯೂ ಒಂದೊಂದು ಸಣ್ಣ ಸಣ್ಣ ಯಕ್ಷಗಾನ ಆಟದ ಮೇಳಗಳು ಇದ್ದವು. ಮೇಳಗಳು ಸಣ್ಣವಾಗಿದ್ದು ಕೇವಲ ಎಂಟು-ಹತ್ತು ಜನಗಳನ್ನೊಳಗೊಂಡಿರುತ್ತಿತ್ತು. ಈಗಿನಂತೆ ಝಗಝಗಿಸುವ ವಿದ್ಯುದ್ದೀಪಾಲಂಕಾರಗಳಿಂದ ಶೋಭಿಸುವ ರಂಗುರಂಗಿನ ರಂಗಸ್ಥಳದ ಮೇಳಗಳಿರಲಿಲ್ಲ. ಅದು ಬಡತನದ ಕಾಲ. ವಾಹನ ಸೌಕರ್ಯಗಳೆಂದರೆ ಎತ್ತಿನ ಗಾಡಿ ಮಾತ್ರ. ಹತ್ತಿರದ ಹಳ್ಳಿಗಳಿಗೆ ಜನಾ ನಡೆಯುತ್ತಲೇ ಹೋಗುತ್ತಿದ್ದರು. ಮಳೆಗಾಲ ಕಳೆದೊಡನೆಯೇ ಇಂತಹ ಮೇಳಗಳು ಘಟ್ಟ ಹತ್ತಿ ಬಂದು ಆಮಂತ್ರಣವಿದ್ದಲ್ಲಿ ಆಟದ ಪ್ರದರ್ಶನ ಕೊಡುತ್ತಾ, ಬೇರೆಬೇರೆ ಕಡೆ ಆಮಂತ್ರಣವಿದ್ದಲ್ಲಿ ಹೋಗುತ್ತಾ ಬೇಸಿಗೆ ಕಳೆಯುತ್ತಿದ್ದರು. ಪ್ರತಿಯೊಂದು ಆಟದ ಮೇಳವೂ ಆಯಾಯ ಊರಿನ ಹೆಸರನ್ನೋ ಅಥವಾ ದೇವಸ್ಥಾನಗಳ ದೇವರ ಹೆಸರನ್ನೋ ತಮ್ಮ ಮೇಳಕ್ಕೆ ಇಟ್ಟುಕೊಳ್ಳುತ್ತಿದ್ದರು. ಈ ಮೇಳದ ವರಿಗೆ 'ಭಾಗವತರ ಆಟದವರ" ಎಂದು ಸಂಬೋಧಿಸುತ್ತಿದ್ದರು.

ಮಲೆನಾಡಿನವರೂ ಸಹ ಯಕ್ಷಗಾನದಲ್ಲಿ ಆಸಕ್ತಿ ಇದ್ದವರು. ಮಳೆಗಾಲಕ್ಕೆ ಮುಂಚೆಯೇ ತಮಗೆ ಪರಿಚಯವಿದ್ದ ಯಕ್ಷಗಾನ ಮೇಳದವರನ್ನು ಆಮಂತ್ರಿಸಿ ಯಕ್ಷಗಾನಕ್ಕೆ ದಿನ ನಿಗದಿ ಮಾಡಿ ವೀಳ್ಯ ಕೊಟ್ಟು ಬರುತ್ತಿದ್ದರು (ವೀಳ್ಯ ಕೊಡುವುದೆಂದರೆ ಶುಭಮಂಗಳ ಸೂಚಕವಾದ ವೀಳ್ಯೆದೆಲೆ- ಅಡಿಕೆ- ಹಣ್ಣುಗಳು- ತೆಂಗಿನಕಾಯಿ ಮತ್ತು ನಗದು ದಕ್ಷಿಣೆ). ಇದರಂತೆ ಮಳೆಗಾಲ ಕಳೆದೊಡನೆಯೇ ಆಮಂತ್ರಿತ ಮೇಳದವರು ತಮ್ಮ ಆಟದ ಪೋಷಾಕುಗಳು ಮತ್ತು ಇದಕ್ಕೆ ಸಂಬಂಧಿಸಿದ ಅಲಂಕಾರಗಳು ಮುಂತಾಗಿ ಬೆತ್ತದ ಪೆಟ್ಟಿಗೆಯಲ್ಲಿಟ್ಟುಕೊಂಡು, ಬಾಡಿಗೆ ಎತ್ತಿನ ಗಾಡಿಯಲ್ಲಿ ಆಗುಂಬೆ ಘಾಟಿ ಮೂಲಕ ಘಟ್ಟದ ಮೇಲೆ ಮಲೆನಾಡಿಗೆ ಆಮಂತ್ರಣವಿದ್ದ ಹಳ್ಳಿಗೆ ಬರುತ್ತಿದ್ದರು. ಬಂದ ನಂತರ ಮೇಳದವರ ಗಾಡಿ ಬಾಡಿಗೆಯನ್ನು ಆಮಂತ್ರಣವಿತ್ತವರು ಪಾವತಿಸಿ ಗಾಡಿ ವಾಪಸು ಕಳುಹಿಸುತ್ತಿದ್ದರು. ಆಟದ ಕಥಾವಸ್ತು ಪುರಾಣಗಳಿಗೆ ಸಂಬಂಧಿಸಿದ್ದಾಗಿರುತ್ತಿತ್ತು. ಈಗಿನಂತೆ ಆಟಕ್ಕೆ ದುಬಾರಿ ರಂಗಸಜ್ಜಿಕೆ ಇರಲಿಲ್ಲ. ರಾತ್ರಿ ಕಾಲದ ಮೇಳದ ರಂಗಸ್ಥಳವೆಂದರೆ

ಚಪ್ಪರದಂತೆ ನಾಲ್ಕು ಕಂಬಗಳನ್ನು ಚಚ್ಚೌಕಾರವಾಗಿ ಹುಗಿದು, ಕಂಬಗಳಿಗೆ ಮಾವಿನ ಟೊಂಗೆಗಳು, ಮಾವಿನ ತೋರಣ, ಬಾಳೆಕಂಬ ಕಟ್ಟಿ, ರಾತ್ರಿ ಬೆಳಕಿಗಾಗಿ ದೊಡ್ಡ ದೊಡ್ಡ ಎಣ್ಣೆ ದೀವಟಿಗೆಗಳನ್ನು ಹಿಡಿದು, ಈ ದೀವಟಿಗೆ ಬೆಳಕಿನಲ್ಲಿ ಆಟವಾಡುತ್ತಿತ್ತು. ರಾತ್ರಿ ಶುರುವಾದ ಆಟ ಬೆಳಗಿನವರೆಗೂ ನಡೆಯುತ್ತಿತ್ತು. ಆಟ ನೋಡಲು ಹಳ್ಳಿಯ ಸುತ್ತಮುತ್ತಲಿನ ಜನರೆಲ್ಲಾ ಬರುತ್ತಿದ್ದರು. ಆಮಂತ್ರಣ ಕೊಟ್ಟವರು ಹತ್ತಿರದ ಸ್ಥಳವಾದರೆ ಕೂಲಿಗಳ ಮುಖಾಂತರವೋ, ದೂರದ ಸ್ಥಳವಾಗಿ ಅನುಕೂಲವಿದ್ದವರು ಎತ್ತಿನಗಾಡಿ ತಂದು ಮೇಳದವರ ಆಟದ ಪೆಟ್ಟಿಗೆಗಳನ್ನೂ ಮೇಳದವರನ್ನೂ ಕರೆದುಕೊಂಡು ಹೋಗುತ್ತಿದ್ದು, ಅವರಲ್ಲಿ ಆಟವಾದೊಡನೇ ಮುಂದಿನ ಹಳ್ಳಿಗೆ ಪ್ರಯಾಣ. ಹೀಗೆ ಮಳೆಗಾಲ ಬರುವವರೆಗೆ ಬೇಸಿಗೆ ಇಡೀ ಆಮಂತ್ರಣ ಕೊಟ್ಟವರಲ್ಲಿ ಆಟವಾಡುತ್ತಾ, ಮಳೆಗಾಲ ಬಂದೊಡನೆ ಊರಿಗೆ ಹೋಗುತ್ತಿದ್ದರು. ಅಂದಿನ ಮಲೆನಾಡಿನ ಮನೋರಂಜನೆಯ ಕಾರ್ಯಕ್ರಮಗಳಲ್ಲಿ ಆಟವೇ ಆಕಾರದ ಮಹತ್ ಮನರಂಜನೆಯಾಗಿದ್ದಿರಬೇಕು.

ಅಂದು ತುಂಬಾ ಬಡತನವಿದ್ದ ಕಾಲ. ಈಗಿನಂತೆ ಉದ್ಯೋಗಾವಕಾಶಗಳು, ವಿದ್ಯೆ ಇರದಿದ್ದ ಕಾಲ. ಜೀವನೋಪಾಯಕ್ಕಾಗಿ ನಿರುದ್ಯೋಗಿಗಳು ನಾನಾ ನಮೂನೆಯ ವೃತ್ತಿ ವೇಷ ಮುಂತಾಗಿ ಬದುಕು ಮಾಡುತ್ತಿದ್ದರು. ಇಂತಹವರುಗಳು ಮನೆ ಮನೆ ಬಾಗಿಲಿಗೆ ಹೋಗಿ ತಮ್ಮ ವೃತ್ತಿ ನೈಪುಣ್ಯ ತೋರಿಸಿ, ಅಕ್ಕಿ ದುಡ್ಡು ಮುಂತಾಗಿ ಪ್ರತಿಫಲ ಪಡೆದು ಜೀವಿಸುತ್ತಿದ್ದರು. ನನ್ನ ಬಾಲ್ಯದಲ್ಲಿ ಮನೆಬಾಗಿಲಿಗೆ ಮಂಗನನ್ನು ಆಡಿಸುವವರು ಬರುತ್ತಿದ್ದರು. ಕೋತಿಯನ್ನು ಕಾಡಿನಲ್ಲಿ ಹಿಡಿದು ತಂದು ತರಬೇತಿ ಕೊಟ್ಟು ಮನೆ ಬಾಗಿಲಿಗೆ ತಂದು ಆಟವಾಡಿಸಿ ಅವರು ನೀಡುತ್ತಿದ್ದ ಅಕ್ಕಿಯನ್ನೋ, ದುಡ್ಡನ್ನೋ, ಉಪಯೋಗಿಸಿ ಬಿಟ್ಟ ಹಳೆಯ ಬಟ್ಟೆಯನ್ನೋ ಅಂಗಲಾಚಿ ಬೇಡಿ ಪಡೆದುಕೊಂಡು ಹೋಗುತ್ತಿದ್ದರು. ಆ ಕಾಲದಲ್ಲಿ ಬಾಲಕನಾಗಿದ್ದ ನಮಗೆಲ್ಲಾ ಈ ಮಂಗನಾಟ ಒಂದು ಮನರಂಜನೆಯಾಗಿತ್ತು. ಇದರಂತೆ ಬಸವನನ್ನು ಆಡಿಸುವವರು, ಹಾವಾಡಿಗರು ಹಕ್ಕಿ ಶಕುನದವರು, ಹಾಲುವಕ್ಕಿಗಳು, ಶಂಖ ಜಾಗಟೆಯ ಗರುಡಗಂಬದ ದಾಸಯ್ಯಗಳು, ಎರಡು ಕಪೋಲಗಳಿಗೂ ತಂತಿ ಸುರಿದುಕೊಂಡ ಬಿಳಿನಾಮದ ಭಯಂಕರ ದೈವಭಕ್ತರು, ಕರಡಿ ಆಡಿಸುವವರು, ಶಿರಸಿ ಮಾರಮ್ಮ ಎಂದು ರಬ್ಬಾರುಬ್ಬಿ ಅರಿಶಿನ-ಕುಂಕುಮ ಲೇಪಿತ ದುರುಮುರುಗಿಯವರು 'ಶನಿ ಶನಿ' ಎನ್ನುತ್ತಾ ಕಾಗೆ ಮೇಲೆ ಕೂತ ಶನಿ ಫೋಟೋ ಇಟ್ಟ ಮಂಟಪ ಹೊತ್ತ ಚತುರ್ಜನ ಪಾದಚಾರಿಗಳು, ಬೈರವನ ವೇಷದ ಬೂದಿ ಬಡುಕರು, ತಲೆಗೆ ಅರ್ಧ ದಿಗಂಬರ ಆಷಾಡಭೂತಿ ಕಾಪಾಲಿಕರು, ಮರಗಿಡ, ಆಕಾಶ, ಗೋಡೆಯೊಂದಿಗೆ ಮಾತನಾಡುತ್ತಾ ಬರುವ ಹುಚ್ಚರು, ಇನ್ನು ನವರಾತ್ರಿ ದೀಪಾವಳಿ ಹಬ್ಬಗಳಲ್ಲಿ ಬರುವ ಹುಲಿವೇಷದವರು, ಆಂಜನೇಯನ ಪಾತ್ರದವರು, ಪಗಡಿ ಕಂಬಳಿಯ ಗೊರವರು ಇಂತಹವರನ್ನೆಲ್ಲಾ ನನ್ನ ಬಾಲ್ಯದಲ್ಲಿ ನೋಡಬಹುದಾಗಿತ್ತು ಬಾಲಕರಾದ ನಮಗೆ ಮನೋರಂಜನೆಯೂ, ತಮಾಷೆಯೂ, ಭೀತಿಯೂ ಆಗುತ್ತಿತ್ತು. ಈಗ ಅಂತಹವರ ಸಂಖ್ಯೆ ವೈವಿಧ್ಯತೆ ತುಂಬಾ ವಿರಳವಾಗಿದೆ.

**ಅಂದಿನ ಮಲೆನಾಡಿನ ಬದುಕಿನ ಸಾಮರಸ್ಯಗಳು, ವೈವಿಧ್ಯತೆ:** ಈಗಿನಂತೆ ಅಂದು ಹೆಂಣುಮಕ್ಕಳು ಬಳೆ ಕೊಳ್ಳಲು ಅಂಗಡಿಗೆ ಹೋಗಬೇಕಾಗಿರಲಿಲ್ಲ. ಪ್ರತಿಯೊಂದು ಹಬ್ಬಕ್ಕೂ 'ಬೊಂಬಾಯಿ ಬಳ" ಎಂದು ಕೂಗುತ್ತಾ ಬಳೆಗಾರರು ಬರುತ್ತಿದ್ದರು. ಹೆಂಣುಮಕ್ಕಳು ಬಾಗಿಲಿನಲ್ಲಿ ನಿಂತು ಆತನನ್ನು ಕರೆದು ಬರಮಾಡಿ ತಮಗೆ ಬೇಕಾದ ಬಳೆಗಳನ್ನು ಕೊಳ್ಳುತ್ತಿದ್ದರು. ಬಳೆಗಾರನೂ ಬುದ್ಧಿವಂತನಾಗಿರುತ್ತಿದ್ದ. ವ್ಯಾಪಾರದ ದೃಷ್ಟಿಯಿಟ್ಟು ಆತ ಹೆಂಣುಮಕ್ಕಳನ್ನು ಹೊಗಳಿ, ತರಹೇವಾರಿ ತೋರಿಸಿ, ಎಲ್ಲವೂ ಚೆನ್ನಾಗಿದೆ ಎಂದು ತನ್ನ ಮಾಲನ್ನು ಹೊಗಳುತ್ತಾ ಮತ್ತಷ್ಟು ಬಳೆ ಖರ್ಚು ಮಾಡುತ್ತಿದ್ದ. ಬಳೆ ಇಟ್ಟುಕೊಂಡಾದನಂತರ ಹೆಣ್ಣುಮಕ್ಕಳು ಬಳೆ ರಾಶಿಗೆ ಅರಿಶಿನ-ಕುಂಕುಮ ಹೂವೇರಿಸಿ, ನಮಸ್ಕರಿಸಿ ಬಳೆಗಾರನಿಗೆ ದುಡ್ಡು ಪಾವ್ತಿಸಿ ಒಂದು ಕಪ್ಪು ಕಾಫಿಯನ್ನೋ ಪಾನಕವನ್ನೋ ಕೊಟ್ಟು ಆತಿಥ್ಯ ಮಾಡಿ, ಮುಂದಿನ ಹಬ್ಬಕ್ಕೆ ಬರುವಂತೆ ಆಮಂತ್ರಣ ಕೊಟ್ಟು ಕಳುಹಿಸುತ್ತಿದ್ದರು.

ಇಂದಿನಂತೆ ಹಿಂದೆ ಹಣ್ಣು, ಹೂವು, ಹಾಲು, ಮೊಸರು, ತರಕಾರಿ ಮಾರಾಟ ಮಾಡುವ ಅಭ್ಯಾಸವಿರಲಿಲ್ಲ. ಒಬ್ಬರ ಮನೆಗೆ ಒಬ್ಬರು ಇವುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಇದರಂತೆಯೇ ಹಬ್ಬ ಹರಿದಿನಗಳಲ್ಲಿ, ಲಗ್ನ ಮುಂತಾದ ಶುಭ ಸಮಾರಂಭಗಳಲ್ಲಿ, ಬಸಿರು ಬಾಣಂತನಗಳಲ್ಲಿ ಪರಸ್ಪರ ಸಹಾಯ ಸಹಕಾರದಿಂದ ಬಾಳುವ ದಿನಗಳಾಗಿದ್ದ ಕಾಲ. ಅಂತೆಯೇ ಮರಣ ಕಾಲಗಳಲ್ಲಿಯೂ, ಖಾಹಿಲೆ-ಕಸಾಲೆ ವಾತಾವರಣಗಳಲ್ಲಿಯೂ ಅಪರ ಕರ್ಮಗಳಲ್ಲಿಯೂ ಇದೇ ಸಹಕಾರವಿತ್ತು. ಹಣಕ್ಕೆ ಮಹತ್ವವಾಗಲೀ, ಹಣದ ಹಪಾಹಪಿತನವಾಗಲೀ ಇರಲೇ ಇಲ್ಲವೆಂದು ಧೈರ್ಯವಾಗಿ ಹೇಳಬಹುದು.

**(ಮುಂದಿನ ಸಂಚಿಕೆಯಲ್ಲಿ ಮುಂದುವರೆಯುವುದು)**

# "ಬಹುಮುಖಿ"



(ಉಮಾ ರಾವ್ ಕಥೆಗಳು) ✍ **ಉಮಾ ರಾವ್**

"ನಾನಾಗಲೇ ವಿಕ್ರಮ ಸ್ಥಾಪಿಸಿಯಾಗಿದೆ. ನೀನು ಎರಡನೆಯನಾಗುವೆ. ಪ್ರಯೋಜನವೇನು? ಚಂದ್ರನ ಮೇಲೆ ಕಾಲಿಟ್ಟ ಎರಡನೇ ವ್ಯಕ್ತಿ ಯಾರು ಹೇಳು? ಮೌಂಟ್ ಎವರೆಸ್ಟ್ ಹತ್ತಿರ ಎರಡನೇ ವ್ಯಕ್ತಿ ಯಾರು ಹೇಳು?'

"ಅದು ನನಗೆ ಬಿಡು, ನಿನ್ನ ಹೆಸರು ಅಳಿಸಿ ಹಾಕಿಸಿ, ನಿನಗಿಂತ ಶ್ರೇಷ್ಠನಾಗುವುದು ನನ್ನ ಕೆಲಸ".

ಶರಣ ಇಲ್ಲವೆಂದ. ಆಗ ಶೇಷಾ ಧಮಕಿ ಹಾಕಿದ. ಒಪ್ಪದಿದ್ದರೆ, ಮಾರನೆಯ ದಿನದ ಹೊತ್ತಿಗೆ ಅವನನ್ನು ಇಲ್ಲವಾಗಿಸುವುದಾಗಿ ಹೇಳಿದ. ತಾನು ಯಾರಿಗೂ ಸುಳಿವು ಸಿಗದೆ ಮಾಡಿಸಿರುವ ಕೊಲೆಗಳ ಪಟ್ಟಿ ಕೊಟ್ಟ. ಶರಣ ಹೆದರಿದ. ಜೀವ ಕಳೆದುಕೊಳ್ಳುವುದಕ್ಕಿಂತ ಈ ಫಾರ್ಮುಲಾ ಒಪ್ಪಿಸಿಬಿಡುವುದು ಒಳಿತಲ್ಲವೇ. ಹಾಗೆಯೇ ಮಾಡಿದ. ಶೇಷಾ ಖುಷಿಯಾದ. ಆ ಬಹುಮುಖಿ ಶಿಲೆಯನ್ನು ಜರುಗಿಸಿದ್ದೇ ಅಲ್ಲದೆ, ಅತ್ಯಂತ ಕನಿಷ್ಠ ಸಮಯದಲ್ಲಿ ಜರುಗಿಸಿದೆ ಎಂದು ಹೇಳಿಕೊಂಡು ಶರಣನ ವಿಕ್ರಮವನನ್ನು ಇಲ್ಲವಾಗಿಸಿದ.

ಈಗ ಶರಣನಿಗೆ ತನ್ನ ಬಗ್ಗೆ ಜುಗುಪ್ಸೆಯೆನಿಸತೊಡಗಿತು. ಇಷ್ಟೆಲ್ಲಾ ಬುದ್ದಿ ಇದ್ದು ಆ ಹಣವಂತನಿಗೆ ಮಣ್ಣು ಮುಕ್ಕಿಸಲಾಗಲಿಲ್ಲವಲ್ಲ? ಛಿ! ಮನೆಗೆ ಬಂದು ಹಾಸಿಗೆಯ ಮೇಲೆ ಉರುಳಿಕೊಂಡಾಗ ಅವನ ಖಿನ್ನತೆ ಎಷ್ಟು ಹೆಚ್ಚಾಗಿತ್ತೆಂದರೆ ಪ್ರಾಣ ಕಳೆದುಕೊಳ್ಳುವ ಯೋಜನೆಗಳನ್ನು ಹಾಕತೊಡಗಿದ. ಎಲ್ಲೆಲ್ಲೂ ಕತ್ತಲೇ ಕತ್ತಲೆನಿಸುತ್ತಿತ್ತು. ನಿಧಾನವಾಗಿ ಮೂಲೆಯಲ್ಲಿ ಬೆಳಕು ಪಸರಿಸತೊಡಗಿತು. ಆಗ ಕಾಂಕಾ ಅದರಿಂದ ನಗುತ್ತ ಮೂಡಿ ಬಂದ.

"ಶರಣ, ಈಗೇನು? ಅದೇಕೆ ಸಾವಿನ ಯೋಚನೆ ಮಾಡುತ್ತೀ... ಇಷ್ಟೆಲ್ಲಾ ನಾನು ನಿನಗೆ ಕೊಟ್ಟಿದ್ದು ಆತ್ಮಹತ್ಯೆಯ ದಾರಿ ಹಿಡಿಯಲೆಂದೇ?"

"ಆಂ... ಇಲ್ಲ ಕಾಂಕಾ. ನಾನು ಬದುಕಿದ್ದು ಏನೂ ಪ್ರಯೋಜನವಿಲ್ಲ. ನೀನು ನನಗೆ ಅಗಾಧ ಬುದ್ದಿಶಕ್ತಿ ಕೊಟ್ಟೆ. ಆದರೆ ಒಬ್ಬ ಹಣದಿಂದ ನನ್ನೆಲ್ಲವನ್ನೂ ಕೊಂಡುಬಿಟ್ಟ... ಧನಬಲದ ಮುಂದೆ ಏನೂ ಇಲ್ಲವೆಂದು ಏನೂ ಇಲ್ಲವೆಂದು ಈಗ ಅರ್ಥವಾಯಿತು. ಕಾಂಕಾ.... ನನ್ನಷ್ಟು ಪ್ರಪಂಚದಲ್ಲಿ ಅತ್ಯಂತ ಧನವಂತನನ್ನಾಗಿ ಮಾಡುತ್ತೀಯಾ.... ಆಗ ಎಲ್ಲರಿಗೂ ಬುದ್ದಿ ಕಲಿಸಲಿಕ್ಕಾದೀತು".

"ನಾನು ಹೇಳಿದೆನಲ್ಲಾ... ನಾನಿರುವುದೇ. ನೀನು ಕೇಳಿದ್ದೆಲ್ಲಾ ಕೊಡಲು....ತಗೋ. ಈ ಇಷ್ಟವನ್ನೂ ಪೂರೈಸಿದ್ದೇನೆ...."

ಕಾಂಕಾ ಎಂದಿನಂತೆಯೇ ನಿಧಾನವಾಗಿ ಇಲ್ಲವಾದ. ಆಗ ಶರಣನಿಗೆ ಖಾತ್ರಿಯಾಯಿತು. ತಾನೀಗ ಶಾಂತಿ ಸುಖ, ಸಮಾಧಾನಗಳ ತುತ್ತತುದಿ ಮುಟ್ಟಲಿರುವೆನೆಂದು, ನಿಮಿಷಗಳಲ್ಲಿ ಶರಣ ಜಗತ್ತಿನಲ್ಲೆಲ್ಲಾ ಹೆಚ್ಚು ಐಶ್ವರ್ಯವಂತನಾದ. ಇದರ ಅರಿವು ಮೂಡುತ್ತಿದ್ದಂತೆಯೇ ಅವನಿಗೆ ತಲೆಯಲ್ಲಿ ಒಂದು ರೀತಿಯ ಮತ್ತು ಏರಿದಂತಾಯಿತು.

ಮೊತ್ತ ಮೊದಲು, ತನ್ನ ಫಾರ್ಮುಲಾ ಕೊಂಡು, ತನ್ನ ಸಂಕಟಕ್ಕೆ ಕಾರಣನಾದ ಶೇಷಾನ ಹತ್ತಿರ ಹೋಗಿ, ಅವನನ್ನು ತನ್ನ ಧನಬಲದಿಂದ ಹೆದರಿಸಿ, ಆ ಬಹುಮುಖಿ ಶಿಲೆಯ ವಿಕ್ರಮವನ್ನು ಮತ್ತೆ ತನ್ನದಾಗಿಸಿಕೊಂಡ. ಅಲ್ಲಿ ತನ್ನ ಹೆಸರನ್ನು ವಿಶ್ವವಿಖ್ಯಾತ ಶಿಲ್ಪಿಗಳಿಂದ ಕೆತ್ತಿಸಿದ. ಮುಂದೆಂದೂ ಯಾರೂ ಈ ಕಾರ್ಯ ಮಾಡಿ ತನ್ನನ್ನು ಮೀರದಂತೆ, ಇದಾದ ನಂತರ ಆ ಬಹುಮುಖಿ ಶಿಲೆಯನ್ನೇ ನಿರ್ನಾಮ ಮಾಡಿಸಿದ. ನಂತರ ಶೇಷಾನ ಅಷ್ಟು ಆಸ್ತಿಯನ್ನೂ ಕೊಂಡು, ಅವನನ್ನು ನಿರ್ಗತಿಕನಾಗಿಸಿದ. ಆಗ ಶರಣನಿಗೆ ತನ್ನ ಮಿಗಿಲಾರು ಎನ್ನಿಸಿ ತುಂಬಾ ಹೆಮ್ಮೆಯೆನ್ನಿಸತೊಡಗಿತು.

ಮತ್ತೆ ತನಗಿಷ್ಟ ಬಂದಂತೆ ಜಗತ್ತಿನ ಬೇರೆ ಬೇರೆ ಕ್ಷೇತ್ರಗಳಲ್ಲಿ ಎಲ್ಲ ರೀತಿಯ ವಹಿವಾಟುಗಳನ್ನೂ ಏರುಪೇರು ಮಾಡಿದ. ಶೇರು ಮಾರುಕಟ್ಟೆಗಳನ್ನು ಹಿಗ್ಗಿಸಿದ. ಕುಗ್ಗಿಸಿದ. ವಜ್ರದ ಗಣಿಗಳನ್ನು ಮುಚ್ಚಿಸಿದ. ನದಿಗಳ ಗತಿ ಬದಲಾಯಿಸಿದ. ಸರ್ಕಾರಗಳನ್ನು ಉರುಳಿಸಿದ. ಜಗತ್ತಿನ ಪ್ರಖ್ಯಾತ ಸುಂದರಿಯೊಡನೆ ಚೆಲ್ಲಾಟವಾಡಿದ.

ಆದರೆ ಕೊಂಚ ದಿನಗಳಲ್ಲೇ ಅವನಿಗೆ ಮತ್ತೆ ಕಿರಿ ಕಿರಿ ಪ್ರಾರಂಭವಾಗಿ ಅಶಾಂತಿ ಹರಡತೊಡಗಿತು. ಹೌದು, ನಾನು ಇಂದು ನನ್ನ ಹಣದಿಂದ ಏನು ಬೇಕಾದರೂ ಕೊಳ್ಳಬಲ್ಲೆ. ಆದರೆ ಇದನ್ನು ಹಿಂದೆಯೂ ಎಷ್ಟೋ ಐಶ್ವರ್ಯವಂತರು ಮಾಡಿದ್ದಾರೆ. ಮುಂದೆಯೂ ಮಾಡುತ್ತಾರೆ. ಇದರಲ್ಲಿ ಹೆಚ್ಚುಗಾರಿಕೆಯೇನು? ಇದೇ ಯೋಚನೆ ಮಾಡುತ್ತಾ ಸೂರ್ಯಾಸ್ತ ನೋಡುತ್ತಾ ಸಮುದ್ರ ದಂಡೆಯ ಮೇಲೆ ಕುಳಿತ.

ಮಿಂಚೊಂದು ಹೊಳೆಯಿತು. ಅಲ್ಲೇ ಕಾಂಕಾ ಪ್ರತ್ಯಕ್ಷನಾದ.

"ಶರಣ, ಈಗೇನು ಬೇಕು ನಿನಗೆ...... ಈಗಲೂ ಖುಷಿಯಾಗಿರದಿದ್ದರೆ ಹೇಗೆ...?"

"ಕಾಂಕಾ, ಇದೊಂದು ಸಲ ನಾನೇನು ಕೇಳುತ್ತೇನೋ ಕೊಡುತ್ತೀಯಾ? ಮತ್ತೆ ನಿನ್ನನ್ನೆಂದೂ ತೊಂದರೆ ಮಾಡುವುದಿಲ್ಲ".

"ನಾನೆಂದು ಇಲ್ಲವೆಂದಿದ್ದೇನೆ..."

"ಹಾಗಾದರೆ... ಹಾಗಾದರೆ.... ನನಗೆ ಇಂದಿನಿಂದ ಸೂರ್ಯನ ಗತಿಯನ್ನು ನಿಯಂತ್ರಿಸುವ ಶಕ್ತಿ ಕೊಡುತ್ತೀಯಾ ಕಾಂಕಾ..."

"ಶರಣ, ನೀನೇನು ಕೇಳುತ್ತಿದ್ದೀಯಾ, ಪರಿಣಾಮ ಏನು ಯೋಚಿಸಿದ್ದೀಯಾ..."
"ನಾನೆಲ್ಲಾ ಯೋಚಿಸಿಯೇ ಕೇಳಿದ್ದೇನೆ ಕಾಂಕಾ, ನನ್ನ ಬುದ್ಧಿ ಶಕ್ತಿಯನ್ನೇ ಪ್ರಶ್ನಿಸುತ್ತೀಯಲ್ಲಾ...."
"ಸರಿ, ನೀನು ಕೇಳಿದಂತಾಗಲಿ..."
ಶರಣ ಕಂಕಾನಿಗೆ ಕಣ್ಮುಚ್ಚಿ ನಮಸ್ಕರಿಸಿದ ದೀರ್ಘವಾಗಿ ಕಣ್ತೆರೆದಾಗ ಕಾಂಕಾ ಅಲ್ಲಿರಲಿಲ್ಲ.
ಮೈಯಲ್ಲಿ ಯಾವುದೋ ಅಲೌಕಿಕ ಶಕ್ತಿ ಸಂಚಾರವಾದಂತಾಗಿ ಶರಣನಿಗೆ ರೋಮಾಂಚನವಾಯಿತು. ಅಷ್ಟು ಹೊತ್ತಿಗೆ ರಾತ್ರಿಯಾಗಿತ್ತು. ಒಳಗೆ ಹೋಗಿ ಮಲಗಿದ. ಏನು ಮಾಡಿದರೂ ನಿದ್ದೆ ಬರದು. ಏನೇನೋ ಯೋಚನೆಗಳು. ಆ ಶಕ್ತಿಯನ್ನು ಉಪಯೋಗಿಸಲೂ ಭಯ. ಅದರೊಂದಿಗೆ ಅದ್ಭುತವಾದ ಸರ್ವಶಕ್ತಿ ಭಾವನೆ. ಸ್ವಲ್ಪ ನಿದ್ರೆ ಹತ್ತಿತ್ತು. ಕಣ್ಣು ಬಿಟ್ಟಾಗ ಸೂರ್ಯೋದಯದ ಹೊತ್ತು.
ಶರಣ ಹೊರಗೆ ಬಂದು ತನ್ನ ಶಕ್ತಿಯ ಬಗ್ಗೆ ಸಾರ್ವಜನಿಕ ಘೋಷಣೆ ಮಾಡಿದ. ಎಲ್ಲರೆದುರಿಗೆ ಅದನ್ನು ಪ್ರದರ್ಶಿಸುವುದಾಗಿ ಹೇಳಿಕೆ ಇತ್ತ.
ಹಿಂದೆಂದೂ ಕಾಣದ ಕೇಳದ ಜನಜಂಗುಳಿ ಸೇರಿತು. ಪ್ರೆಸ್ ನವರು, ಫೋಟೋ ಗ್ರಾಫರ್ ಗಳು, ವಿಜ್ಞಾನಿಗಳು, ಜ್ಯೋತಿ ಶಾಸ್ತ್ರಜ್ಞರು ಯೋಗಿಗಳು, ಮಾಂತ್ರಿಕರು ಎಲ್ಲರೂ ಸೇರಿದರು.
೧೨ ಗಂಟೆಗೆ ಸರಿಯಾಗಿ ಶರಣ ಮನೆಯಿಂದ ಹೊರಗೆ ಬಂದು, ಅವನಿಗಾಗಿಯೇ ನಿರ್ಮಿಸಿದ್ದ ಎತ್ತರದ ಸ್ಥಳದಲ್ಲಿ ನಿಂತು ಕಣ್ಮುಚ್ಚಿ ಕೈ ಮುಗಿದು ಸೂರ್ಯನತ್ತ ಕೈ ಚಾಚಿದ. ತಾನು ಮತ್ತೆ ಆಜ್ಞೆ ಕೊಡುವವರೆಗೂ ಅಲ್ಲಿಯೇ ನಿಲ್ಲಲು ಅವನಿಗೆ ಹೇಳಿದ. ನಿಧಾನವಾಗಿ ಕ್ಷಣಗಳುರುಳಿದಂತೆ ಸೂರ್ಯನ ಚಲನೆ ನಿಂತಿತು. ಜಗತ್ತೇ ಅಲ್ಲೋಲ ಕಲ್ಲೋಲವಾಯಿತು. ನದಿ, ಸಾಗರ, ತಾರೆ, ಚಂದ್ರರ ಗತಿ ಬದಲಾಗಿ ಭಯಂಕರ ಅಸ್ತವ್ಯಸ್ತತೆ ಹರಡಿತು. ಜನರೆಲ್ಲಾ ಅವನ ಅಲೌಕಿಕ ಶಕ್ತಿಯ ಮುಂದೆ ಬಾಗಿದರು. ಅವನನ್ನು ದೇವರೆಂದು ಕರೆದರು. ಕರುಣೆ ತೋರಿಸೆಂದರು, ಸೂರ್ಯನಿಗೆ ಮತ್ತೆ ಚಲಿಸಲು ಹೇಳಿ ಮನೆಗೆ ಬಂದು ಹಾಸಿಗೆಯ ಮೇಲೆ ಉರುಳಿದ ಶರಣ. ತನ್ನ ಮಹತ್ಸಾಧನೆಗೆ ಬೀಗಿದ.
ಅಂದು ರಾತ್ರಿ ಅವನಿಗೆ ತಳಮಳ ಪ್ರಾರಂಭವಾಯಿತು. ಅದೇಕೋ ಇದುವರೆಗೂ ಇದ್ದ ಆನಂದ, ತೃಪ್ತಿ ಕರಗಿ ಒಂದು ರೀತಿಯ ಶೂನ್ಯ ಆವರಿಸಿತು. ರಾತ್ರಿಯೆಲ್ಲಾ ನಿದ್ದೆ ಬರದೆ ಹೊರಳಾಡಿದ. ಬೆಳಗಾಗುವ ಹೊತ್ತಿಗೆ ಮೆಲ್ಲನೆ ಕಿಟಕಿಯಿಂದ ಹೊರಗೆ ತಲೆಹಾಕಿದ. ಕೆಂಪು ಮೂಡುತ್ತಿತ್ತು. ಸೂರ್ಯ ತನ್ನ ಅಣತಿಗಾಗಿ ಕಾಯುತ್ತಿದ್ದಾನೆಂದೆನಿಸಿತು. ಹೊಟ್ಟೆ ಕಿವುಚಿತು. "ಕಾಂಕಾ...ಕಾಂಕಾ..."ಎಂದು ದಿಕ್ಕೆಟ್ಟವನಂತೆ ಚೀರತೊಡಗಿದ. ಕಾಂಕಾ ಮೂಡಿಬಂದ.
"ಏನು ಶರಣ...ಏನಾಯಿತು..."
"ಕಾಂಕಾ ಬಂದೆಯಾ.... ನಿನಗಾಗಿಯೇ ಕಾದಿದ್ದೆ. ನನ್ನನ್ನು ಈ ಅಶಾಂತಿಯಿಂದ ಪಾರು ಮಾಡು ಕಾಂಕಾ.... ನನಗೇನಾಗುತ್ತಿದೆಯೋ ಗೊತ್ತಿಲ್ಲ..."
"ಶರಣ, ನೀನು ಬೇಕಾದ್ದೆಲ್ಲಾ ಪಡೆದೆ... ಸೂರ್ಯನನ್ನೇ ಕರತಲಾಮಲಕ ಮಾಡಿಕೊಂಡೆ.... ಇದಕ್ಕಿಂತ ಮಿಗಿಲದ್ದು ಇನ್ನೇನಿದೆ ಹೇಳು?"
"ಕಾಂಕಾ, ಇದುವರೆಗೂ.....ಸಾವಿರಲಿ ಬದುಕಿರಲಿ, ಸುಖವಿರಲಿ, ದುಃಖವಿರಲಿ, ಯಾತ್ರ ಪರಿವೆಯೂ ಇಲ್ಲದೆ ತನ್ನ ಪಾಡಿಗೆ ತಾನು ಹುಟ್ಟುತ್ತಾ ಮುಳುಗುತ್ತಾ ಇದ್ದ ಸೂರ್ಯನನ್ನು ದಿನಾ ಬೆಳಗ್ಗೆ ನೋಡಿದಾಗ ಎಷ್ಟೋ ಸಮಾಧಾನವಾಗುತ್ತಿತ್ತು..... ಈಗ ಅವನೂ ನನ್ನ ಅಣತಿಗಾಗಿ ಕಾಯುತ್ತಿದ್ದಾನಲ್ಲಾ..... ಈ ಬದುಕು ಬೇಡ ಕಾಂಕಾ...." ಎಂದು ಚಡಪಡಿಸತೊಡಗಿದ.
ಕಾಂಕಾ ಸುಮ್ಮನೆ ಅವನನ್ನು ನೋಡುತ್ತಿದ್ದ.
ಶರಣ ಕಾಂಕಾನಿಗೆ ಶರಣಾದ.
"ಕಾಕಾ, ನನ್ನ ಮೇಲೆ ಕರುಣೆ ಇಡು, ಇದೆಲ್ಲಾ ಬರಿಯ ನನ್ನ ಕನಸಾಗಿಸು... ನಿಜವಲ್ಲವೆಂದು ತೋರಿಸು ಕಾಂಕಾ"..... ಎಂದು ಗೋಗರೆಯತೊಡಗಿದ.
ಕಾಂಕಾ ನಗಲು ಶುರು ಮಾಡಿದ.
"ಶರಣ, ಏನು ಹೇಳುತ್ತಿದ್ದೀಯಾ...ಅಂಥಾ ಮೂರ್ಖನೇ ನೀನು... ಇದೆಲ್ಲಾ ನಿನ್ನ ಕನಸಲ್ಲದೆ ಮತ್ತೇನು? ನಿಜವೆಂದುಕೊಂಡೆಯಾ?"
ಶರಣ ಸಂತಸದಿಂದ ಬಿಟ್ಟಕಣ್ಣು ಬಿಟ್ಟ ಬಾಯಾದ.
"ಹೌದೇ ಕಾಂಕಾ.... ನಾನು ಧನ್ಯ ಕಾಂಕಾ.... ಧನ್ಯ ಕಾಂಕಾ... ಧನ್ಯ. ನನ್ನನ್ನು ಈ ಕನಸಿನಿಂದ ಬಿಡುಗಡೆ ಮಾಡು ಕಾಂಕಾ, ಈಗಲೇ ಬಿಡುಗಡೆ ಮಾಡು...."
ಕಾಂಕಾ ಮತ್ತೆ ನಗತೊಡಗಿದ.
"ಶರಣ ನಾನು ಬರಿಯ ನಿನ್ನ ನಿನ್ನ ಕನಸೆನ್ನುವುದು ನಿಜ... ಆದರೆ ಅದರಿಂದ ಹೊರಬರುವುದು ಅಷ್ಟು ಸುಲಭವಲ್ಲ...ಏಕೆಂದರೆ ಅಂತೆಯೇ ನೀನು ನನ್ನ ಕನಸು..."
ಶರಣ ಅವಾಕ್ಕಾದಂತೆ ಕಾಂಕಾ ನಗುತ್ತಲೇ ಇದ್ದ.

# ಆಳು - ಆಳುವವರು ಭಾಷೆ



✍ ಡಾ. ಮಂಜುನಾಥ್

ಕಾಲಾಂತರದಿಂದಲೂ ನಾವು ಆಡುವ ಭಾಷೆ ಜನರಿಗೆ ಸೇರಿದ್ದು, ಅವರಾಡುವ ಮಾತೇ ಭಾಷೆಯಾಗಿ ಪೀಳಿಗೆಯಿಂದ ಪೀಳಿಗೆಗೆ ಬಂದಿದೆ ಎನ್ನುವ ಮಾತು ಎಷ್ಟು ನಿಜ? ಆಳುಗಳಿಗೆ ದುಡಿಮೆ ಗೊತ್ತೇ ಹೊರತು ದೊಡ್ಡತನ ಅವರದ್ದಲ್ಲ . ಹೌದು, ತಾಯಿ ತಾನು ಮಾಡು ಮಾತಾಡುವುದನ್ನು ತನ್ನ ಮಕ್ಕಳಿಗೂ ಕಲಿಸುತ್ತಾಳೆ. ಅವು ಆಮೇಲೆ ದೊಡ್ಡವರಾದ ಮೇಲೆ ಇನ್ನಿತರೊಡನೆ ಸೇರಿದಾಗ ಅವರಾಡುವ ಮಾತುಗಳನ್ನು ಕಲಿಯುತ್ತಾರೆ.

ಆಳುಗಳಿಂದ ಕೆಲಸ ಮಾಡಿಸಲು ಪಟೇಲರು ಇನ್ನೊಂದು ಊರಿನಿಂದ ಒಬ್ಬ ಮೇಸ್ತ್ರಿಯನ್ನು ಕರಿಸುತ್ತಾರೆ. ಅವನಿಗೆ ಪಟ್ಟಣಕ್ಕೆ ಹೋಗುವ ವಾಡಿಕೆ. ಆ ಪಟ್ಟಣದ ಪೇಟೆಯ ಮಾತುಗಳನ್ನು ಅವನು ಕಲಿತಿರುತ್ತಾನೆ. ತಾನು ಈ ಹಳ್ಳಿಯ ಆಳುಗಳಿಂದ ಕೆಲಸ ಮಾಡಿಸುವಾಗ ತನ್ನ ದೊಡ್ಡಸ್ತಿಕೆಯನ್ನು ತೋರಲೋಸುಗ ಆ ಪಟ್ಟಣದ ಮಾತುಗಳನ್ನೇ ಹೇಳುತ್ತಾನೆ. ಪಟ್ಟಣದಲ್ಲೂ ಆ ಪಾಳೇಗಾರನ ಮನೆ ಹೆಚ್ಚಿನದು. ಅವನ ಮನೆಯಲ್ಲಿ ಆಡುವ ಮಾತೇ ಸೊಗಸು. ಅದಕ್ಕಿಂತ ಹೆಚ್ಚಾಗಿ ಅವರ ಮನೆಗೆ ಬರುವ ಪಂಡಿತರು ಆಡುವ ಮಾತೇ ಹೆಚ್ಚು ಸೊಗಸು. ಅವರು ಕನ್ನಡದಲ್ಲಿ ಸಂಸ್ಕೃತ ಪದಗಳನ್ನು ಬಳಸಿದಾಗ ಅದು ಸೊಗಸಾಗಿ ಕಾಣುವುದೇನು ಸೋಜಿಗ. ಹೀಗೆ ನಮ್ಮ ಹಳ್ಳಿಯ "ಚೆಲುವೆ", ಗ್ರಾಮ "ಸುಂದರಿ"ಯಾದಳು". ನಮ್ಮ "ಕಾಡು" 'ಅರಣ್ಯ'ವಾಯಿತು, ಹೊತ್ತು '' ಆದಿತ್ಯ", "ಸೂರ್ಯ"ನಾದ, ಆ ತಿಂಗಳು 'ಚಂದ್ರ'ನಾದ.

ದೊಡ್ಡ ಪಟ್ಟಣದಲ್ಲಿ ಇರುವ ದೊರೆಗಳ ಆಸ್ಥಾನದಲ್ಲಿ ಸಂಸ್ಕೃತವೇ ಮಾತನಾಡುತ್ತಾರೆಂಬ ವದಂತಿ. ಅಲ್ಲಿ ಬಾಗಿಲು ಕಾಯುವವನು ಹೇಳುವ ಮಾತು. "ಅಂಗಾ ಮತ್ತೆ ಅವರ ಮನೇವ್ರು ಅದರಾಗೆ ಅಂತಾರಾ?". "ಅದು ಗೊತ್ತಿಲ್ಲ ಬುಡು. ಅವರ ಮನೆಯವರನ್ನ ನಾ ಎಲ್ಲಿ ಕಂಡೀನಿ ಇವರು ತಮ್ಮ ಕೂಡೇ ಇಲ್ಲಿ ಅಂಗೆ ಮಾತಾಡ್ತಾರೆ ನೋಡಪ್ಪ".

"ಆ ವಯ್ಯ ಒಂದು ಸಾಲಿ ನಡಿಸ್ತಾರಂತೆ ಔದಾ?"

"ಹ್ಞೂ. ತ್ವಾಟದಾಚೆಗೆ ಒಂದು ಅಟ್ಟ ಐತಲ್ಲ, ಅದ್ರಾಗೆ ನಡೆಸ್ತಾವ್ರೆ".

"ಅಂಗಾ, ನಮ್ಮ ಐಕಳ್ನೂ ಅಲ್ಲಿಗೆ ತಕ್ಕಂತಾರಾ ಕಲಿಯೋಕೆ"

"ನಂಗೊತ್ತಿಲ್ಲಪ್ಪ ನೀನೇ ಒಂದು ತವ ಬಂದು ಅವರನ್ನ ಕೇಳಿ ನೋಡು"

ಹಳ್ಳಿಯ ಆಳು, ಆ ಪಟ್ಟಣದ ಸಾಲಿಗೆ ತನ್ನ ಹೈದರನ್ನ ಸೇರಿಸುತ್ತಾನೆ. ಅವನಿಗೆ ಆಗುವ ಹಿಗ್ಗು ಮತ್ಯಾರಿಗೂ ಆಗಿಲ್ಲ. ಅವನ ಮಗ ಸಾಲೀಲಿ ಕಲಿತ ಅದ್ಯಾಕೆ ಬಂದು ಊಟಕ್ಕೆ ಕೂರ್ತಾನೆ.

"ಏ ಯವ್ವ ಈ ಇಟ್ಟಿಗ್ಗೆ ಸರಿಯಾಗಿ ಲವಣ ಆಕಿಲ್ಲ" ಅಂತಾನೆ. ಅವನವ್ವಂಗೆ ತಿಳಿಯಾಕಿಲ್ಲ. "ಏನು, ಏನು ಕಮ್ಮಿ ಆಗ್ಯೆತೋ?" ಅಂತಾಳೆ. 'ಲವಣ' ಕಾಣವ್ವಾ ಲವಣ". ಏನೋ ಈಗ್ಲೇ ಮಾಡಿದ್ನಲ್ಲೋ, ಎಲ್ಲಿ ಒಣಗ್ಯೆತೋ".

ಆಳು, "ಏ ಬುಡು, ನಿಮ್ಮವಂಗೆ ಏನೂ ತಿಳಿಯಕ್ಕಿಲ್ಲ. ಅವಳು ಸಾಲಲೀಲಿ ಕಲೀಲಿಲ್ಲ ಬುಡು" ಹೀಗೆ ಉಪ್ಪು ಲವಣವಾಯಿತು, ಗಾಳಿ ಅನಿಲವಾಯಿತು. ಸಂಸ್ಕೃತವನ್ನು ಬೆರೆಸಿ ಆಡುವ ಮಾತು ಕಲಿತವರ ಮಾತು.

ಮುಂದೆ ಈ ದೊರೆಗಳನ್ನು ಹತ್ತಿಕ್ಕಿ ತುರುಕರು ಬಂದು, ದೆಹಲಿಯ ಆಮೇಲೆ ಬಹಾಮನಿಯ ಗದ್ದುಗೆಯನ್ನು ಏರಿದರು. ಅವರಿಗೆ ಯಾರೂ ಪರ್ಶಿಯನ್ ಆಡುತ್ತಾರೋ ಅವರೇ ಹೆಚ್ಚಿನವರು. ಅವರ ಮನೆಯಲ್ಲಿ ಪರ್ಶಿಯನ್ ಮಾತನಾಡುತ್ತಾರೆ ಎಂಬ ವದಂತಿ. ಅವರ ಮನೆಯಲ್ಲಿ ಆಮೇಲೆ ಅವರ ಸೈನ್ಯದಲ್ಲಿರುವವರೆಲ್ಲರಿಗೂ ಇದು ಸೊಗಸಾಗಿ ಕಾಣುತ್ತದೆ. ಆದ್ದರಿಂದ ನಮ್ಮ ಸುಂದರಿ "ಖೂಬ್ ಸೂರತ್" ಆದಳು. "ಅನಿಲ", "ಹವಾ" ಆಯಿತು, "ಲವಣ", "ನಮಕ್" ಆಯ್ತು.

ಮುಂದೆ ಈ ದೆಹಲಿಯ ಬಾದಶಹಗಳನ್ನು ಹತ್ತಿಕ್ಕಿ ಫಿರಂಗಿಯವರು ಬಂದರು. ಅವರ ಶಾಲೆಯಲ್ಲಿ ಕಲಿತವರಿಗೆಲ್ಲಾರಿಗೆ ಖೂಬ್ ಸೂರತ್ "Beautiful" ಅದಳು. "ಹವಾ", "Air" ಆಯಿತು. "ನಮಕ್", "Salt" ಆಯಿತು. ಹೊತ್ತು ಅಥವಾ ವಕ್ತ್ , "Time" ಆಯಿತು. ಆ ಶಾಲೆಗಳಲ್ಲಿ ಕಲಿತವನೇ ಪಂಡಿತನಾದ.

ಈಗ ಈ ಆಳುಗಳಿಗೆ ತೆರಿಗೆ, ಸುಂಕ ಎಂದರೆ ತಿಳಿಯುವುದೇ ಇಲ್ಲ. Tax ಅಂದರೆ ಗೊತ್ತಾಗುತ್ತದೆ. ಸದ್ಯಕ್ಕೆ ಮನೆಯಲ್ಲಿ ಹಿಟ್ಟು, ಎಸರು ಅಂತೆಯೇ ಇವೆ. ಇನ್ನು ತುಸು ಹೊತ್ತಿನಲ್ಲಿ ಬ್ರೆಡ್ ಕರ್ರಿ ಆಗೋದರಲ್ಲಿ ಏನು ಸಂದೇಹವಿಲ್ಲ.

ಭಾಷೆ ಎಂದೂ ಅರಸನದ್ದೇ. ಈಗ ನಮ್ಮ ಉತ್ತರ ಕರ್ನಾಟಕದಲ್ಲಿ ಪೇಶ್ವೆ ದೊಡ್ಡ ಶ್ರೀಮಂತ. ಅವನ ಮಾತೇ ಸುಂದರ. ಆದ್ದರಿಂದ ನಾವು 'ಸರಿ'ಯೆನ್ನುವುದು ಸರಿಯಲ್ಲ, 'ಬರೋಬ್ಬರಿ' ಎಂದು ಹೇಳಬೇಕೆಂದು ಕನ್ನಡಿಗರೆಲ್ಲ ಪೇಶ್ವೆಯವರ ಆಡಳಿತದಲ್ಲಿ ಕಲಿತರು. ಅಂತೇ ನಾವಿಂದು 'Absolutely' ಎಂದು ಹೇಳುತ್ತೇವೆ. ಇನ್ನೇನು ಬೇಡ ಈಗ ಕೇವಲ 50- 60 ವರ್ಷಗಳ ಹಿಂದೆ ನಾವೇನಾದರೂ ಹೋಗುವಾಗ ಬೇರೆಯವರಿಗೆ ತಾಕಿದರೆ, ನಾವು ಹಿಂದುರುಗಿ 'ತಪ್ಪಾಯ್ತು' ಎಂದು ಹೇಳಿ ಅವರನ್ನು ಮುಟ್ಟಿ ಕಣ್ಣಿಗೊತ್ತಿಕೊಂಡು ಮುಂದೆ ಸಾಗುತ್ತಿದ್ದೆವು. ಈಗ Sorry Sorry ವಾಡಿಕೆಯಾಗಿದೆ. ನಮಗೆಲ್ಲ ಯಾರಾದರೂ ಏನಾದರೂ ಕೊಟ್ಟರೆ ಅಥವಾ ಒಳ್ಳೆಯದಾಗಿ ಮಾತನಾಡಿಸಿದರೆ, ಒಳ್ಳೆಯದಾಗಲಿ ಎಂದು ಹಿರಿಯರು ಕಲಿಸಿದ್ದರು. ಈಗ ಅದು Thank you Thank you ಆಗಿದೆ.

ಹೀಗೆ ಅರಸನ ಮಾತು ಮಂದಿಯ ಮಾತಿನ ಮೇಲೆ ತುಂಬಾ ಪ್ರಭಾವ ಬೀರುತ್ತದೆ. ಸ್ವಾತಂತ್ರ್ಯದ ಮುನ್ನ ನಮಗೆಲ್ಲ ಕನ್ನಡದಲ್ಲಿಯೇ ಕಲಿಸುತ್ತಿದ್ದರು. ಈಗ ಅದನ್ನು ಕೇವಲ ದಡ್ಡರು ಕಲಿಯುತ್ತಾರೆ ಎಂದಾಗಿದೆ. ಏಕೆಂದರೆ ನೌಕರಿ ಸಿಗಬೇಕಾದರೆ ಇಂಗ್ಲಿಷ್ ಬೇಕು. ಅಂದರೆ Employee ಎಂದರೆ ಆಳು. ಆಳಿಗೆ ಆಳುವವನೇ ಮುಖ್ಯ. ಏಕೆಂದರೆ ಅವನಿಗೆ ಸಂಬಳ ಇಲ್ಲವೇ ಊಳಿಗ ಸಿಗಬೇಕು ಅವನೆಂದು ಸ್ವತಂತ್ರನಲ್ಲ.




**Quickie 1) A beggar's brother dies but the man who died had no brother…………WHO ?**
**Quickie 2) The day before yesterday Mary was 7 years old, Next year she will turn 10 years……..WHO ?**

**There is a fruit in each sentence. Just need to identify the fruit from the given sentence:-**
**Example: Question: Did you see a man go by ? Answer: (Mango)**

1. He found his home lonely after his dog's death
2. 2. One dare not rob an anaconda of its prey.
3. 3. The crook made his escape armed with gem.
4. 4. She told her uncle money was what she needed more.
5. 5. If I go out now, I shall miss my cousin.
6. 6. Either courage or anger made him move swiftly.
7. 7. The beggar held out his cap pleading for money.
8. 8. Matter regarding rape should be dealt differently.
9. 9. The English teacher Ryan teaches French too.
10. 10. He saw his papa yawning at work.
11. 11. He had kept on his lap lumpsum of money.
12. 12. Are classes for Telegu available in this city.
13. 13. It is easy to shape a child rather than a man.
14. 14. He is extremely cheesy guy.
15. 15. Can I wear a khaki with a black shirt.

The map below shows the street locations of a city. Position three police officers so that any point on the street can be seen by At least one officer




## Word Puzzles Brain Teasers

Word Puzzle (Wacky Wordie): can you figure out which Compound noun or phrase each of these represent? Here's a hint: Number 1 is Growing Economy. Good luck!

| | | |
|---|---|---|
| ECONOMY | JOB IN JOB | REC ORD |
| A B C D E F G H<br>I J K L M N O P<br>Q R S T V W<br>X Y Z | GIVE GET<br>GIVE GET<br>GIVE GET<br>GIVE GET | TRAVEL<br>CCCCCCCC |
| YOUR TIME | N<br>N SICK N<br>N | MARY<br>+ MARY<br>------------<br>------------ |
| F<br>E I<br>R G<br>U | LADY<br>------------<br>LADY<br>LADY | R O O T<br>O O<br>O O<br>T O O R |

**Answers to the last month puzzles – Teasers**

**1) HEROIN 2) BREATH 3) A MAP**

**Answers to Identify the word with (Word Puzzles Brain Reaser BRA)**

**1) Cobra 2) Brake 3) Brand 4) Library 5) Brad**
**6) Brandy 7) Algebra 8) Libra 9) Brave 10) Brahmin**
**11) Cerebra 12) Bracelet 13) Celebration 14) Branch 15) Vibrate**
**16) Zebra 17) Brass**

**Answers to the Word Puzzles Brain Teaser**

**1) Sand Box 2) Man over Board 3) I Understand 4) Reading between Lines 5) Long Underwear 6) Cross Roads 7) Down Town 8) Tricycle 9) Split Level 10) 3 Degrees below zero 11) Neon Lights 12) Circles Below Eye 13) High Chair 14) Paradise 15) Touch Down 16) Five Feet below Ground 17) Mind Over Matter 18) He is behind Himself 19) Back Word Glance 20) Life Over Death 21) GI Overseas 22) Space Program 23) See through Blouse 24) Just Between You & Me**

*Compiled by Mr. Ananth Banwasi*

# Few More Strides Before the Centenary

✍ **M. A. N. Prasad**



We are bringing from this issue a serial by M.A.N. Prasad about the Association. Prasad has been associated with the management of the Association for more than two decades and has gone through the times when we renovated and rebuilt our building. He will be sharing his intimate knowledge of the Association with the readers through these columns.

- Editor

**Remodelling and Renovation of the building**

At one time the mess in the Association was a big draw and had many members who were regular diners at the mess. The ground floor of the Association had a huge dining hall to accommodate these diners. But, with the passage of time the number of diners came down and the Managing Committee felt that the available space on the ground floor could be better utilized by remodelling the area. Accordingly, the dining hall was made smaller and a large hall was created, which could be used for functions.

As our Diamond Jubilee was approaching, a special AGM was held to elicit members' views on how best to celebrate the event. It was decided that the building be suitably renovated by creating a full-fledged auditorium on the second floor, providing lift facility and creating a terrace garden. Six sub-committees were formed in this connection. The funding of this project was through publication of souvenirs.

The celebration of Diamond Jubilee was a grand affair. 'Karnataka Utsava' was held which had various performing arts being presented. An exhibition of paintings was also held under this Utsava. Eminent artists from Karnataka were invited to participate in the Utsava. The Utsava was sponsored by the Kannada & Culture Department of Karnataka Govt.

At the instance of Karnataka Tourism Department, the Association set up a "Karnataka Tourist Information Centre" which was a big draw. People from Mumbai and Maharashtra would come to that centre to know more about places to visit in Karnataka. They would also seek the guidance of the centre in preparing their tour itinerary.

The necessary drawings were made and application submitted for the alteration and renovation of the building. A formal Bhoomi Pooja was organized when the Director of Kannada & Culture, Sri. Chandrahasa Gupta visited Mumbai. He and Sri.B. N. Srikrishna together did the Bhoomi Pooja. The municipal corporation sat on our application and used all the available technicalities to delay the approval. We had to wait for the next six to seven years to get the necessary approvals.

We had approached the Govt. of Karnataka for a grant towards the building. They promised us a grant of Rs.5 lakhs, out of which Rs.1 lakh would be released in that year

and the balance in subsequent years. They suggested that we take a loan from State Bank of Mysore to meet our immediate needs. They would put in a word to the Bank to accommodate a loan for us. Accordingly, we approached SBM for a loan of Rs.25 lakhs.

Though the higher authorities at SBM headquarters were very enthusiastic and helpful, the branch and its Manager wanted clear approval of their headquarters and Zonal office for every move. Further, the branch where we had our account was not dealing with industrial or commercial units and hence had its own apprehensions in lending money to a social organization. They referred the matter to their legal department and awaited their opinion.

In the meanwhile, the demolitions of the various structures on the second floor had been made. The roof was removed. The outer walls of the second floor were open to rain and shine. Monsoon was imminent and could commence any time. We pleaded with the bank Manager to give us a loan of Rs.5 lakhs, pending the ongoing formalities of our loan, so that we could cast a slab on second floor and avoid the walls getting damaged in rain.

Luckily, we could get some funding and we could cast a slab on the second floor, thus preventing any damage to the building. The legal cell of the bank said that there is no provision to borrow in our bye laws. We therefore need to pass a resolution in the General Body authorising the committee to borrow monies. Accordingly, we passed such a resolution and the loan got processed.

The revenue for the Association was from the three rooms and the dormitory facility for the students and industrial workers on tour. With the rooms and hall on second floor being dismantled, the Association had no revenue. The bank loan would help us to complete the civil works. We needed to rent out the first floor to a bank or such corporate organization.

Our search for a bank to lease out our first floor began. Many banks were contacted. But their needs and requirements were different. In the meantime, our financial position was very bad. Paying utility bills and salaries itself was a problem. There have been occasions when we have pooled up monies to pay these.

Around this time, our member Dr. Manjunath had joined Inchcape India Pvt. Ltd., an organization specialized in testing and certification. They were looking for an office space to establish their office and laboratory. They had short listed various places which they would visit and select. Association was included in that list. They saw our place and were quite impressed. Further, they felt more inclined to associate with a social organization than any commercial organizations. So, we got a tenant for our first floor.

We could now think of completing our project.

# ಶ್ರೀರಂಗರ ನಾಟಕಗಳ ಒಳನೋಟಗಳು

**(ಫೆಬ್ರುವರಿ 17 ಶುಕ್ರವಾರ 2023 ನಮ್ಮ ಅಸೋಸಿಯೇಷನ್ ಏರ್ಪಡಿಸಿದ ಮೂರು ದಿನಗಳ ವಾರ್ಷಿಕ "ಶ್ರೀರಂಗ ನಾಟಕೋತ್ಸವ" ಉದ್ಘಾಟನಾ ಸಮಾರಂಭದಲ್ಲಿ ಅಂದಿನ ಮುಖ್ಯ ಅತಿಥಿ ಶ್ರೀ ಹರ್ಷ ಡಂಬಳ ಇವರು ಮಂಡಿಸಿದ ಪ್ರಬಂಧ)**

ಶ್ರೀರಂಗರ ನಾಟಕಗಳನ್ನು ಎರಡು ನೆಲೆಯಲ್ಲಿ ಅರ್ಥಮಾಡಿಕೊಳ್ಳುವ ಪ್ರಯತ್ನ ಅಂದಿನಿಂದ ಇಂದಿನವರೆಗೆ ನಡೆದಿದೆ. ಒಂದು- ಮಾನವ ಹಾಗೂ ಅವನು ಕಟ್ಟಿಕೊಂಡ ಸಮಾಜ, ಅದರ ಓರೆಕೋರೆಗಳು, ವ್ಯಕ್ತಿಗಳಲ್ಲಿ ಕಂಡುಬರುವ ಆತ್ಮ ವಂಚನೆಯ ಮೂಲ, ಅದನ್ನು ನಂಬುವ ಅವನ ಪರಿಸರ, ಇದು ಅವರ ಒಟ್ಟು ದರ್ಶನಕ್ಕೆ ಸಂಬಂಧಪಟ್ಟದ್ದು. ಇನ್ನೊಂದು, ಸಮಾಜದ ಅಂಗವಾದ ರಂಗಭೂಮಿ. ಇಲ್ಲಿ ಅವರ ಬರವಣಿಗೆಯ ಕಲಾತ್ಮಕತೆಯ ಅಭಿವ್ಯಕ್ತಿ ಪ್ರಮುಖವಾಗಿದೆ.

ಅವರ ಸಮಗ್ರ ಸಾಹಿತ್ಯದಲ್ಲಿ ನಾವು ಸ್ಪಷ್ಟವಾಗಿ ಗಮನಿಸಬೇಕಾದದ್ದು ಅವರ ಲೌಕಿಕ ದೃಷ್ಟಿಕೋನ- ಸಂಪೂರ್ಣ secular vision ಅರ್ಥಾತ್ ಲೌಕಿಕ ಮತ್ತು ಜಾತ್ಯಾತೀತವಾದದ್ದು. ಕನ್ನಡ ಸಾಹಿತ್ಯದ ಖ್ಯಾತ ವಿಮರ್ಶಕ ಶ್ರೀ ಜಿ.ಎಸ್. ಆಮೂರ ಈ ತರಹದ ದೃಷ್ಟಿಕೋನವನ್ನು ಕಾರ್ನಾಡ ಹಾಗೂ ಕಾರಂತರ ನಾಟಕ ರಚನೆಯಲ್ಲಿ ಕಾಣಸಿಗುವುದಿಲ್ಲ ಎನ್ನುತ್ತಾರೆ. (ಶ್ರೀರಂಗರ ಸಾರಸ್ವತ ಸಮಗ್ರಕ್ಕೆ ಬರೆದ ಪ್ರಸ್ತಾವನೆ)

ಶ್ರೀರಂಗರ ನಾಟ್ಯ ದರ್ಶನದಲ್ಲಿ ತಾತ್ವಿಕತೆ ಇದೆ. ಆದರೆ ಆಧ್ಯಾತ್ಮಿಕತೆ ಇಲ್ಲ. ಶ್ರೀರಂಗರ ವ್ಯಕ್ತಿತ್ವದ ಮೇಲೆ ಪಾಶ್ಚಿಮಾತ್ಯರ ಪ್ರಭಾವನ್ನು ಅಲ್ಲಗೆಳೆಯಲಾಗದು. ಇದಕ್ಕೆ ಇನ್ನೊಂದು ಮಹತ್ವದ ಕಾರಣವೆಂದರೆ ಶ್ರೀರಂಗರ ಸಂಸ್ಕೃತ ನಾಟಕದ ಆಳವಾದ ಅಧ್ಯಯನ. ಸಂಸ್ಕೃತ ನಾಟಕದಲ್ಲಿ ಮೂಲವಾಗಿ ನಾವು ಕಾಣುವುದು ಪರಂಪರಾಗತವಾದ ಲೌಕಿಕತೆ. ಅಲ್ಲದೆ ಈ ತಂತ್ರ ಶ್ರೀರಂಗರ ನಾಟಕಗ ಮೂಲ ಸೂತ್ರವೂ ಆಗಿದೆ.ಶ್ರೀರಂಗರ ನಾಟಕ ದರ್ಶನ ಲೌಕಿಕತೆಗೆ ಸೀಮಿತವಾಗಿದ್ದರೂ ಅದನ್ನು "ಸಮೃದ್ಧ ಹಾಗೂ ಬಹು ಆಯಾಮಿ ದರ್ಶನ" ಎಂದು ಅಮೂರರು ಬಣ್ಣಿಸುತ್ತಾರೆ. ಬ್ರಾಹ್ಮಣ ಸಮಾಜದ ಆ ಕಾಲದ ಅವನತಿಯ ಚಿತ್ರಣವನ್ನು, ಸಂಪ್ರದಾಯದ ಅಂಧ ಅನುಕರಣೆಯ ಪರಿಚಯವನ್ನು ಕಣ್ಣು ಕಟ್ಟುವಂತೆ ಕಟ್ಟಿಕೊಟ್ಟದ್ದು ಅವರ "ಹರಿಜನ್ವಾರ", "ಸಂಧ್ಯಾಕಾಲ". ಈ ನಾಟಕಗಳಿಂದ ಅವರ ದರ್ಶನದ ಋಣಾತ್ಮಕ ಆಯಾಮಗಳಿಗೆ ಮಹತ್ವ ದೊರೆತದ್ದು ಹೌದು.

ಆದರೆ ಅವರ ನಾಟಕ "ಸ್ವಾರ್ಥ ತ್ಯಾಗ" ಅವರಲ್ಲಿ ಹುದುಗಿದ್ದ ಸಾಮಾಜಿಕ ಹಾಗೂ ರಾಜಕೀಯ ಆದರ್ಶಗಳನ್ನು ಬಿಚ್ಚಿಡುತ್ತದೆ. ಕೇವಲ 16ನೇ ವಯಸ್ಸಿನಲ್ಲಿ ರಚಿಸಲ್ಪಟ್ಟ ಈ ನಾಟಕ, ಅವರು ರಾಜಕೀಯ ವ್ಯವಸ್ಥೆಯಾದ ಪ್ರಜಾಪ್ರಭುತ್ವಕ್ಕೆ ಮಾರುಹೋದದ್ದನ್ನೂ, ಮುಂಬರುವ ದಿನಗಳಲ್ಲಿ ಭಾರತದ ಅಭಿವೃದ್ಧಿ ಪ್ರಜಾಪ್ರಭುತ್ವ ವ್ಯವಸ್ಥೆಯಿಂದಲೇ ಸಾಧ್ಯ, ಏಕಸ್ವಾಮಿತ್ವದ ಪ್ರಭುತ್ವ ಮಾರಕ ಎಂಬ ಅವರ ನಂಬಿಕೆಯನ್ನೂ ಬಯಲು ಮಾಡುತ್ತದೆ. ಮುಂದೆ ಭಾರತದಲ್ಲಿ ತುರ್ತು ಪರಿಸ್ಥಿತಿ ಘೋಷಣೆಗೆ ಅವರ ಕಟು ವಿರೋಧ ಅವರ ರಾಜಕೀಯ ಧೋರಣೆ ಬದಲಾಗದಿದ್ದನ್ನು ತೋರಿಸುತ್ತದೆ.

ಅವರ "ವಿಜಯ" ಗಾಂಧೀಜಿಯವರ ಅಸಹಕಾರ ಚಳುವಳಿಯ ಹಿನ್ನೆಲೆಯ, ಬ್ರಿಟಿಷ್ ಸಾಮ್ರಾಜ್ಯದ ವಿರೋಧದ ಒಂದು ರಾಜಕೀಯ ನಾಟಕ. ಇದೇ ವಸ್ತುವನ್ನು ನಾವು "ಸ್ವಾರ್ಥತ್ಯಾಗ" ಮತ್ತು "ಧರ್ಮ ವಿಜಯ" ಗಳಲ್ಲೂ ಕಾಣುತ್ತೇವೆ.

ಮಹಾತ್ಮ ಗಾಂಧಿಯವರ ಪ್ರಭಾವ ಶ್ರೀರಂಗದ ಮೇಲೆ ಗಾಢವಾಗಿತ್ತು. ಅದು ಅನೇಕ ನಾಟಕಗಳ ಸಂಭಾಷಣೆಯಲ್ಲಿ ಪರೋಕ್ಷ ಹಾಗೂ ನೇರವಾಗಿ ನಿರೂಪಿತವಾದದ್ದು ಕಂಡುಬರುತ್ತದೆ. ಮೇಲಿಂದ ಮೇಲೆ ಅವರ ಕೃತಿಗಳಲ್ಲಿ ಸ್ಪಷ್ಟವಾಗಿ ಕಾಣುವ ಅಂಶ ಇನ್ನೊಂದು ಅಂಶ ಮುಂದಾಳು ಮತ್ತು ಮುಂದಾಳತ್ವ. ಇದು ಮುಂದೆ "ಶೋಕ ಚಕ್ರ"ದಲ್ಲಿ ಬಹುವಾಗಿ ಚಿತ್ರಿತವಾಗಿದೆ.

ಶ್ರೀರಂಗರ ಅನೇಕ ನಾಟಕಗಳ ಹೆಸರು ದಾಸರ ಪದಪುಂಜಗಳಿಂದ ಬಂದವು. ಇಂಗ್ಲೆಂಡಿನಲ್ಲಿದ್ದಾಗಲೇ ಭಾರತಕ್ಕೆ ತಿರುಗಿ ಹೋಗಿ ಸೇವೆ ಮಾಡಬೇಕು ಎಂಬ ಹಂಬಲವಿತ್ತು 1929ರಲ್ಲಿ ಇಂಗ್ಲೆಂಡಿನಿಂದ ವಾಪಸು ಬಂದು, ನೌಕರಿ ಹುಡುಕುತ್ತಾ, ಪುಣೆಯ ಮಿತ್ರರ ಕೋಣೆಯಲ್ಲಿ ವಾಸ ಮಾಡುತ್ತಿದ್ದಾಗ ಅಲ್ಲಿದ್ದ ಪುರಂದರದಾಸರ ಕೀರ್ತನೆಗಳ ಸಂಗ್ರಹದಿಂದ ದಾಸರ ಪದಪಂಕ್ತಿಗಳ ಪ್ರಭಾವಕ್ಕೆ ಒಳಗಾದರು. ಕನ್ನಡದ ಶೈಲಿಯಿಂದ ಪ್ರಭಾವಿತರಾದರು. ಸದಾ ಕಾಲ ದಾಸರ ಪದಪುಂಜ ಅವರ ಸ್ಮೃತಿಪಟಲದಲ್ಲಿ ಜಾಗೃತವಾಗಿ ಮೇಲಿಂದ ಮೇಲೆ ಅವುಗಳ ಉಚ್ಚಾರ. ಸ್ವಂತ ಅನುಭವ ವಿವರಗಳಿಂದ ತುಂಬಿದ ಸಂಭಾಷಣೆಯ ಸಂವಾದಿ ನಾಟಕ "ಉದರ ವೈರಾಗ್ಯ" ಇದು ದಾಸರ "ಉದರ ವೈರಾಗ್ಯವಿದು ನಮ್ಮ ಪದುಮನಾಭನಲಿ ಲೇಶ ಭಕುತಿ ಇಲ್ಲ" ದಿಂದ ಪ್ರೇರಿತವಾದದ್ದು.

ಈ ನಾಟಕದಿಂದ ಶ್ರೀರಂಗರು ಕನ್ನಡ ಸಾಹಿತ್ಯದಲ್ಲಿ ನಾಟಕಕಾರರೆಂದು ಪರಿಚಿತರಾದರು. ಇಲ್ಲಿಯ ನಾಟಕದೊಳಗೆ ಚಿತ್ರಣಗೊಂಡಿದ್ದು ಶ್ರೀರಂಗದ ವ್ಯಕ್ತಿ ಚಿತ್ರ ಹಾಗೂ ಆಗಿನ ಸಾಮಾಜಿಕ ಚಿತ್ರ. ವಿನೋದಿ ಸಂಭಾಷಣೆಯಿದ್ದರೂ ಸಮಾಜದ ಸೋಗನ್ನು

ಬಯಲಿಗೆಳೆದ ನಾಟಕವಿದು ಆಗಿನ ಕಾಲದ ತರುಣರು ಮರಾಠಿ ಭಾಷೆ ಸಂಸ್ಕೃತಿಯ ವ್ಯಾಮೋಹಕ್ಕೆ ಒಳಗಾಗುವುದನ್ನು ಓದುಗರ ಕಣ್ಣಿಗೆ ಕಟ್ಟುವಂತೆ ಚಿತ್ರಿತವಾಗಿದೆ. ನಾಟಕದ ದೀರ್ಘ ಮುನ್ನುಡಿಯಲ್ಲಿಇಂಗ್ಲೆಂಡಿನಲ್ಲಿ ಶ್ರೀರಂಗರ ಮೇಲೆ ಬರ್ನಾಡ್ ಷಾರ ಪ್ರಭಾವ ಆದದ್ದು ಗಮನಕ್ಕೆ ಬರುತ್ತದೆ.

"ವೈದ್ಯ ರಾಜ" ನಾಟಕದಲ್ಲಿ ಪುಣ್ಯದಿಂದ ಮುಕ್ತಿ ಎಂಬ ಸಾಮಾನ್ಯ ನಂಬಿಕೆಯನ್ನು ತಪ್ಪಿಸಿ ಪಾಪದಿಂದಲೇ ಮುಕ್ತಿ ಎಂಬ ಹೊಸ ಅರ್ಥವನ್ನು ನೀಡಿದರು.ಬಡತನವನ್ನೇ ಸ್ವಾಭಾವಿಕ ಜೀವನವೆಂದು ತಿಳಿದಿದ್ದ ಜನಕ್ಕೆ ಶ್ರೀರಂಗರು ತಮ್ಮ ಕೃತಿಗಳ ಮೂಲಕ ಅದು ತಪ್ಪು ತಿಳುವಳಿಕೆ. ಬಡತನದಲ್ಲಿ ಅಭಾವ ಮುಖ್ಯ, ಸರಳ ಜೀವನದಲ್ಲಿ ತ್ಯಾಗ ಮುಖ್ಯ. ಇದ್ದವನು ಮಾತ್ರವೇ ತ್ಯಾಗ ಮಾಡಬಲ್ಲ ಎಂಬ ಸಂದೇಶವನ್ನು ಸಾರಿದರು.

ನಮ್ಮ ಯೋಗ್ಯತೆಯನ್ನು ನಾವು ಅರಿತಿಲ್ಲ. ಈ ಗತ ವೈಭವದ ಅರಿವನ್ನು ಮತ್ತೆ ಮರಳಿ ತರಲು ಶ್ರೀರಂಗರು ಈ "ಪರಮೇಶ್ವರ ಪುಲಕೇಸಿ" ಐತಿಹಾಸಿಕ ನಾಟಕ ಬರೆದರು. ಐಹೊಳೆ ಶಾಸನ ಮತ್ತು ಹರ್ಷ ಚರಿತ್ರೆಯಂತಹ ಸಾಹಿತ್ಯ ಕೃತಿಯನ್ನು ಆಧಾರವಾಗಿಟ್ಟುಕೊಂಡು ಬರೆದ ನಾಟಕ ಇದು.

"ಸಂಸಾರಿಗ" ನಾಟಕದಲ್ಲಿಸಂತತಿ ನಿಯಂತ್ರಣದ ವಿಚಾರವಿದೆ. "ಮುಕ್ಕಣ್ಣನ ವಿರಾಟ ಪುರುಷ" ನಾಟಕಕ್ಕೆ ಕಾರಣವಾದ ಒಂದು ಸಂಗತಿಯನ್ನು ಶ್ರೀರಂಗರು ತಮ್ಮ ಆತ್ಮಜಿಜ್ಞಾಸೆಯಲ್ಲಿ ದಾಖಲಿಸಿದ್ದಾರೆ. ಇಂಗ್ಲೆಂಡಿಂದ ತಿರುಗಿ ಬಂದು, ನೌಕರಿಯ ಹುಡುಕಾಟದಲ್ಲಿ ಮುಂಬಯಿಯಲ್ಲಿದ್ದರು. ಕೈಯಲ್ಲಿ ಕಾಸಿಲ್ಲ. ಇಂಗ್ಲಿಷ್ ಕೋಚಿಂಗ್ ಕ್ಲಾಸಿಗಾಗಿ ಸಂಪರ್ಕಿಸಿರಿ ಎಂದು ಪತ್ರಿಕೆಗೆ ಒಂದು ಜಾಹೀರಾತು ನೀಡುತ್ತಾರೆ. ಕಲಿತಿದ್ದೇನು? ಮಾಡುವುದೇನು? ಇಂಗ್ಲೆಂಡಿಗೆ ಹೋಗಿ ಬಂದ ಮನುಷ್ಯನಿಗೆ ಈ ಸ್ಥಿತಿಯೆ? ತಾವು ಮಾಡಹೊರಟಿರುವ ಕಾರ್ಯವನ್ನು, ಮನಸ್ಥಿತಿಯನ್ನು ವೇಶ್ಯಾವಾಟಿಕೆಗೆ ಹೋಲಿಕೆ ಮಾಡಿಕೊಂಡು, ದೇಹವನ್ನು ಮಾರಿಕೊಳ್ಳುವವಳು ವೇಶ್ಯೆ. ಮನಸ್ಸು, ಬುದ್ಧಿ, ಕಲೆ, ಕ್ರಿಯಾಶಕ್ತಿ ಅಥವಾ ಯಾವ ಶಕ್ತಿಯನ್ನು ಮಾರಿಕೊಂಡರೂ ಅದು ವೇಶ್ಯಾವೃತ್ತಿಗೆ ಸಮಾನ ಎಂಬ ದೃಷ್ಟಿಯಿಂದ ಈ ನಾಟಕವನ್ನು ಬರೆದರು.

ಈ ನಾಟಕ ಸಾಮಾಜಿಕ ವ್ಯವಸ್ಥೆಯ ವಿರುದ್ಧದ ಬಂಡಾಯ. ಇಲ್ಲಿ ನಡೆಯುವ ಕ್ರಿಯೆ ಎಲ್ಲವೂ ಸಾಂಕೇತಿಕವಾದದ್ದು ಆದರ್ಶ ಪಾತಳಿಯಲ್ಲಿ ನಡೆಯುವಂತಹದ್ದು, ಈ ನಾಟಕವನ್ನು ಮೆಚ್ಚಿದವರಲ್ಲಿ ಪಂಡಿತ ತಾರನಾಥರು,. ಮುದವೀಡು ಕೃಷ್ಣರಾಯರು,ಗರೂಡ ಸದಾಶಿವರಾಯರು ಇತ್ಯಾದಿಗಳಿದ್ದರು.

ಶ್ರೀ ಆಮೂರರು ತಮ್ಮ ಶ್ರೀರಂಗರ ಸಾಹಿತ್ಯದ ಸಮೀಕ್ಷೆಯ ಗ್ರಂಥವನ್ನು"ಆಧುನಿಕ ಕನ್ನಡ ಸಾಹಿತ್ಯದ ವಿರಾಟ ಪುರುಷ" ಎಂದು ಕರೆದಿದ್ದಾರೆ. ಸಾಹಿತಿಗೆ ಇರಬೇಕಾದ ತನ್ನ ಅರಿವು, ಹೊಸ ಸೃಷ್ಟಿಗಾಗಿ ತನ್ನನ್ನೇ ತಾನು ಆಹುತಿ ಕೊಡುವ ತ್ಯಾಗ ಮತ್ತು ಬುದ್ಧಿ, ಇವೆರಡು ಇದ್ದದ್ದರಿಂದ ಶ್ರೀರಂಗರು "ವಿರಾಟ ಪುರುಷ"ರು!

"ಹರಿಜನ್ವಾರ" ಬ್ರಾಹ್ಮಣ ಸಮಾಜದ ಅವನತಿಯ ಚಿತ್ರಣದ ನಾಟಕ. ಇದು ರಾಜಕೀಯ ನಾಟಕದಂತೆ ಪ್ರಾರಂಭವಾಗಿ ಮೌಲಿಕ ವಿಶ್ಲೇಷಣೆಯಲ್ಲಿ ಕೊನೆಗೊಳ್ಳುತ್ತದೆ. ಇಲ್ಲಿ ಬರುವ ರಾಜಕೀಯ ಹುನ್ನಾರ ಇಂದಿನ ಚುನಾವಣೆಯನ್ನು ನೆನಪಿಸುವವು.

ಶ್ರೀರಂಗರ ನಾಟಕದ ರಚನೆ ಕೇವಲ ಘಟನೆಗೆ ಕೇಂದ್ರೀಕೃತವಾಗಿಲ್ಲ. ಸಾಮಾಜಿಕ ಒಳನೋಟ ಮತ್ತು ಸಂಘರ್ಷ ಇಲ್ಲಿ ಮಹತ್ವದ್ದಾಗುತ್ತದೆ. "ಹರಿಜನ್ವಾರ" ಬಹು ಚರ್ಚಿತ ಮತ್ತು ಎಲ್ಲಾ ಕಾಲಕ್ಕೂ ಪ್ರಸ್ತುತ ನಾಟಕ. ಇಲ್ಲಿಯ ಘಟನೆ ಒಂದು ಕಾಲಘಟ್ಟವನ್ನು ಪ್ರಸ್ತುತಪಡಿಸಿದರೆ ಅದರ ಹಿಂದೆ ಇರುವ ಭಾವನೆ, ಅಂತಕರುಣೆ, ಸಂಘರ್ಷ,ವೈಚಾರಿಕತೆ ಸರ್ವಕಾಲಕ್ಕೆ ಸಲ್ಲುತ್ತದೆ.

"ಅಧಿಕಮಾಸ" ಮುಂಬೈಯಲ್ಲಿ ವೃತ್ತಿಯ ಪರದಾಟದಲ್ಲಿ ಇದ್ದ ಕಾಲದಲ್ಲಿ ಬರೆದ ಇನ್ನೊಂದು ನಾಟಕ. ಭಾರತೀಯ ವಿದ್ಯಾರ್ಥಿಯೊಬ್ಬನಿಂದ ಮೋಸ ಹೋದ ಒಬ್ಬ ಇಂಗ್ಲಿಷ್ ತರುಣಿಯ ಪ್ರಸಂಗದ ಹಿನ್ನೆಲೆಯಲ್ಲಿ ರಚಿತವಾದದ್ದೆಂದು ಶ್ರೀರಂಗರ ಹೇಳಿಕೆ. ವಿವಾಹಕ್ಕೆ ಸಂಬಂಧಿಸಿದಂತೆ ಸ್ತ್ರೀಯರು ಎದುರಿಸಿದ ಸಮಸ್ಯೆ ಈ ನಾಟಕದ ವಸ್ತು.ಈ ನಾಟಕದಲ್ಲಿ ಮದುವೆಯ ಬಗೆಗೆ ವಿವಿಧ ಆಯಾಮಗಳ ವಿವಿಧ ಮಗ್ಗುಲುಗಳ ಸ್ವಾರಸ್ಯಕರ ಚರ್ಚೆ ಇದೆ. ಶ್ರೀರಂಗರ ಕ್ರಾಂತಿಕಾರಿ ವಿಚಾರಗಳು ಸ್ಪಷ್ಟ ಸಂಭಾಷಣೆ ರೂಪವನ್ನು ಪಡೆದಿವೆ. ಅಧಿಕ ಮಾಸ ನಾಟಕ ಪ್ರಯೋಗ ರಂಗಭೂಮಿಯಲ್ಲಿ ಅಷ್ಟು ಯಶಸ್ಸು ಕಾಣಲಿಲ್ಲ.

ಮದುವೆಯ ಬಗ್ಗೆ ಶ್ರೀರಂಗರ ವಿಚಾರಗಳು ಸಾಕಷ್ಟು ಕ್ರಾಂತಿಕಾರಕವಾಗಿದ್ದವು. ಅವರಿಗೆ ಮದುವೆಯಲ್ಲಿ ಆಚರಣೆಗಳ ಬಗ್ಗೆ ಸಾಕಷ್ಟು ಬೇಸರವಿತ್ತು.ಅವರು ಸ್ವತಹ ಹೆಚ್ಚು ಪ್ರಾಮಾಣಿಕ ಮತ್ತು ಕಡಿಮೆ ಅವಹೇಳನಕಾರಿ ರಜಿಸ್ಟರ್ ವಿವಾಹ ಪದ್ಧತಿಯನ್ನು ಮೆಚ್ಚಿದ್ದರು.

"ಹೆಣ್ಣೋ ಗಂಡೋ" ಅಪ್ರಕಟಿತ ನಾಟಕದಲ್ಲಿ ಶ್ರೀರಂಗರು ಆ ಕಾಲದ ವಿಧವೆಯರ ಗಂಡು ಅಲ್ಲದೆ ಹೆಣ್ಣು ಆಗದೆ ಸಮಾಜಕ್ಕೆ

ಕಲಂಕ ರೂಪವಾದ ಮೂರನೆಯ ಹೃದಯವಿದ್ರಾವಕ ಅವಸ್ಥೆಯನ್ನು ಬಿಂಬಿಸಿದ್ದಾರೆ. ನಾಟಕದಲ್ಲಿ ನಗುವಿನ ಸ್ವರೂಪ ನಮ್ಮ ಸಮಾಜದ ವಿಕೃತಿಯನ್ನು ಪ್ರದರ್ಶನಕ್ಕೆ ಇಟ್ಟು ಬರುವ ನಗು.

"ನರಕದಲ್ಲಿ ನರಸಿಂಹ" ನಾಟಕದ ಯಮ ಮತ್ತು ನರಸಿಂಹನ ರೋಚಕ ಸಂಭಾಷಣೆ ಶ್ರೀರಂಗರ ಇಂಟೆಲೆಕ್ಚುವಲ್ ಅಂತಸ್ಫುರಣದ ಬೇಗುದಿ, ಸಾಮಾಜಿಕ ಕಳಕಳಿಯನ್ನು ಹೊರಹಾಕುತ್ತದೆ. ಬೇರೆ ಯಾವ ಲೇಖಕರಲ್ಲಿಯೂ ಇಂತಹ ಕಲ್ಪನಾ ಶಕ್ತಿ ಸ್ಫುರಿಸಲು ಸಾಧ್ಯವಿಲ್ಲ. ಸಾಮಾಜಿಕ ಕ್ರಾಂತಿ ಸಾಧಿಸುವಲ್ಲಿ, ಭಾಷಾ ಪ್ರಯೋಗ ಪ್ರಾಮುಖ್ಯತೆಯನ್ನು ಪಡೆದುಕೊಳ್ಳುತ್ತದೆ. ಇಂತಹ ಭಾಷಾ ಪ್ರಯೋಗ ಬಹು ಕಷ್ಟ ಸಾಧ್ಯ. ವಿಮರ್ಶಕ ಆಮೂರರು ಪ್ರಾಶ್ಚಾತ್ಯ ನಾಟಕದ ಪ್ರಭಾವದಿಂದ ಇವರ ಬರಹಗಳು ಬಂದುದು ಎಂದು ಅಭಿಪ್ರಾಯ ಪಡುತ್ತಾರೆ.

ಶ್ರೀರಂಗರು ಜಾತಿಭೇದ ವಿಷಯವಾಗಿ ಹೊಂದಿದ ಉಗ್ರವಾದ ಧೋರಣೆ ಇಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. ಮುಂಬೈಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಕಾಲಕ್ಕೆ ಈ ನಾಟಕ ಪ್ರಯೋಗವಾಗಿತ್ತು.

"ಸಂಧ್ಯಾಕಾಲ" ಕೌಟುಂಬಿಕ ಚೌಕಟ್ಟಿನ ನಾಟಕ. ಇಲ್ಲಿ ಮುಖ್ಯವಾಗುವುದು ಕೌಟುಂಬಿಕ ಸಂಬಂಧ,ವೈರಾಗ್ಯದ ಸೋಗು ಹಾಗೂ ಲಂಪಟ ಪ್ರವೃತ್ತಿ. ಬ್ರಾಹ್ಮಣಿಕೆಯ ಸಂಕೇತವಾದ ಜನಿವಾರ ಹಾಗೂ ಸಂಧ್ಯಾವಂದನೆಯ ಸುತ್ತ ಈ ನಾಟಕ ನಡೆಯುತ್ತಾ ಹೋಗುತ್ತದೆ. ರೋಗಗ್ರಸ್ತ ಬ್ರಾಹ್ಮಣ ಸಮಾಜದ ಮೀಮಾಂಸೆ ನಾಟಕದ ಕೇಂದ್ರ ವಸ್ತು. ವಿಲಾಸಿ ರಂಗಭೂಮಿಯಲ್ಲಿ ಜನಪ್ರಿಯ ನಾಟಕ ಇದು.

"ಜರಾಸಂಧ" ನಾಟಕದ ಚರ್ಚೆಯಲ್ಲಿ ಶ್ರೀರಂಗರು ವ್ಯಕ್ತಪಡಿಸಿದ ಅಭಿಪ್ರಾಯ ಇದು- ನಾಟಕದಲ್ಲಿ ಕತೆ ಇಲ್ಲ, ಆದರೂ ಚರಿತ್ರೆ ಇದೆ, ಘಟನೆ ಇಲ್ಲ. ಕೊನೆ ಆದ ಮಾತಿನ ಹೊರತು ಮತ್ತೊಂದಿಲ್ಲ. ಆದರೂ ನಾಟಕ ನೋಡುವಾಗ ಏನೋ ನಡೀಲಿಕ್ಕೆ ಹತ್ತಿದೆ ಅಂತ ಭಾಸವಾಗುತ್ತದೆ. ಒಂದೇ ಮನೆತನದ ಮೂರು ವ್ಯಕ್ತಿಗಳ ಒಂದೊಂದು ಕಾಲಘಟ್ಟದ ಪ್ರತೀಕ ಬಿಂಬಿಸುವ ಪಾತ್ರಗಳು ಇಲ್ಲಿವೆ. ತಲೆಮಾರುಗಳ ಸಾಮಾಜಿಕ ತಾಕಲಾಟ ನಿಜವಾದ ಕಥಾವಸ್ತು.

ಭಾರತಕ್ಕೆ ಸ್ವಾತಂತ್ರ್ಯ ಬಂದ ಕಾಲದಿಂದ ಶ್ರೀರಂಗದ ಬರವಣಿಗೆಯಲ್ಲಿ ರಾಜಕೀಯ ಪ್ರಜ್ಞೆ ಪ್ರಧಾನವಾಗಿ ತೋರಿತು. ಸ್ವಾತಂತ್ರ್ಯಾನಂತರ ಸಾಮಾಜಿಕ ವಿಷಯದಲ್ಲಿ ನಮ್ಮಲ್ಲಿ ಆಧುನಿಕ ವಿಚಾರಗಳ ದೃಷ್ಟಿ ಮೂಡಿತು. "ಗೆಳೆಯ ನೀನು ಹಳೆಯ ನಾನು" ಕುಟುಂಬದ ಚೌಕಟ್ಟಿನ ನಾಟಕ. ಉತ್ತರ ಕರ್ನಾಟಕದ ಹವ್ಯಾಸ ತಂಡಗಳಲ್ಲಿ ಒಂದು ಕಾಲದಲ್ಲಿ ಬಹಳ ಜನಪ್ರಿಯ ನಾಟಕ.

ಕಾಳಿದಾಸನ "ಶಾಕುಂತಲಾ"ವನ್ನು ಅನುಸರಿಸಿ ಸಮಾನಾಂತರವಾಗಿ ರೂಪಿಸಲ್ಪಟ್ಟ ಶ್ರೀರಂಗರ ಸಾಮಾಜಿಕ ನಾಟಕ, ವೈಚಾರಿಕ ದ್ವಂದ್ವಗಳಿಲ್ಲದ, ಎಲ್ಲ ಕಾಲಕ್ಕೂ ಪ್ರಸ್ತುತವಾದ ನಾಟಕವಾಗಿದೆ.

ಸುತ್ತಲಿನ ಪ್ರಪಂಚದಲ್ಲಿ ಕಂಡು ಬಂದ ಸ್ವಾರ್ಥ ವಂಚನೆಯನ್ನೇ ಕೇಂದ್ರಬಿಂದುವಾಗಿ ಇಟ್ಟುಕೊಂಡು ಬರೆದ ನಾಟಕ "ಜೀವನ ಜೋಕಾಲಿ". ಇದರ ಜೀವ ಧ್ವನಿ. ಪ್ರಗತಿ ಶೂನ್ಯತೆ. ಜೀವನ ಪ್ರವಾಹದಲ್ಲಿ ಹಿರಿಯ ಪೀಳಿಗೆ ಮತ್ತು ತರುಣ ಪೀಳಿಗೆಯ ನಡುವಿನ ಬೃಹತ್ ಅಂತರವನ್ನು ಸೂಚಿಸಲು ರಂಗಸ್ಥಳವನ್ನು ಮಧ್ಯದಲ್ಲಿ ವಿಭಾಗಿಸಿ ಪ್ರದರ್ಶಿಸಬೇಕೆಂದು ರಂಗ ಸೂಚನೆ ಇದೆ.

ನಾಟಕದ ರಚನೆಯಲ್ಲಿ ಹೊಸ ಮನ್ವಂತರವೇ ಅದ "ಕತ್ತಲೆ ಬೆಳಕು" 50ರ ದಶಕದಲ್ಲಿ ರಂಗಭೂಮಿಯಲ್ಲಿ ಹುಟ್ಟಿಕೊಂಡ ಹೊಸ ಅಲೆಯ ನಾಟಕ. ಶ್ರೀರಂಗರ ಸೃಜನಶೀಲ ಶಕ್ತಿ ಈಗ ಹೆಚ್ಚು ವ್ಯಾಪಕವಾಗಿ ಮಾನವನ ಸ್ವಭಾವದ ಚಿತ್ರಣಕ್ಕೆ ಒತ್ತು ಕೊಡುವ ಕ್ರಿಯಾತ್ಮಕತೆಯತ್ತ ತನ್ನನ್ನು ತಾನೇ ತೊಡಗಿಸಿಕೊಂಡಿತು. ಶ್ರೀರಂಗರು ಮುನ್ನುಡಿಯಲ್ಲಿ ಬರೆದಂತೆ "ಇದರಲ್ಲಿ ಕಲೆ, ಜೀವನ ವಿಮರ್ಶೆ ಎಲ್ಲವೂ ಸೇರಿದೆ. ತಂತ್ರ ಹೊಸತು. ನಮ್ಮ ರಂಗಭೂಮಿಯ ಸತ್ಯತೆಯನ್ನು ಮೀರಿ ನಾನು ಈ ನಾಟಕವನ್ನು ಬರೆಯುತ್ತಿದ್ದೇನೆ ಎಂಬುದು ನನ್ನ ದೋಷವಲ್ಲ. ನಾಟಕದಿಂದ ನಾಟಕಕ್ಕೆ ನಾನು ನುರಿತಂತೆ ನನ್ನ ಶೈಲಿ ತಂತ್ರಗಳು ಬೆಳೆದಂತೆ ನಮ್ಮ ರಂಗಭೂಮಿ ಮುಂದುವರಿಯದಿದ್ದರೆ ಅದರ ಹೊಣೆ ಹೆಚ್ಚಾಗಿ ನಮ್ಮ ಸಾಮಾಜಿಕ ಜೀವನದ ಮೇಲಿದೆ".ಕತ್ತಲೆ ಬೆಳಕು ನಿಶ್ಚಿತವಾಗಿ ಕನ್ನಡದ ಮೊದಲ ನವ್ಯ ನಾಟಕ.

ಇದರ ಹಿಂದೆಯೇ ಬಂದದ್ದು "ಕೇಳು ಜನ ಮೇಜಯ". ಸಾಕಷ್ಟು ವಿಚಾರ ತಂತ್ರ, ಸಂವಾದದಿಂದ ತುಂಬಿದ ಈ ನಾಟಕ ಶ್ರೀರಂಗರನ್ನು ಜಾಗತಿಕ ಮಟ್ಟದ ನಾಟಕಕಾರರೆಂದು ಗುರುತಿಸುವುದಕ್ಕೆ ಕಾರಣೀಭೂತವಾಗಿದೆ. ಪ್ರಥಮ ಪ್ರದರ್ಶನ ಶ್ರೀರಂಗರ ನಿರ್ದೇಶನದಲ್ಲಿಯೇ ನಡೆಯಿತು. ಶ್ರೀರಂಗರು ಅಭಿಪ್ರಾಯದಂತೆ ನಾಟಕವನ್ನು ಪ್ರೇಕ್ಷಕರು ಮೆಚ್ಚಿದರೂ, ಅವರಿಗೆ ನಾಟಕ

ಅರ್ಥವಾಗಿರಲಿಲ್ಲ. ನಂತರದ ಪ್ರಯೋಗ ಮುಂಬೈ, ಕರ್ನಾಟಕದ ಥಿಯೇಟರ್ಸ್ ಅಧಿನಾಯಕತ್ವದಲ್ಲಿ. ಇದರ ಹಿಂದಿ ಅನುವಾದದ ದೆಹಲಿಯ ಪ್ರದರ್ಶನ ಜಾಗತಿಕ ಮಟ್ಟದ ಪ್ರಶಂಸೆ ಪಡೆಯಿತು. ಅಷ್ಟೇ ಅಲ್ಲದೆ ರಾಷ್ಟ್ರೀಯ ನಾಟಕವೂ ಆಯಿತು.

"ದಾರಿಯಾವುದಯ್ಯ ವೈಕುಂಠಕ್ಕೆ" ರಂಗಸ್ಥಳದಲ್ಲಿ ಎರಡು ಭಾಗ ಏಕಕಾಲಕ್ಕೆ ಎರಡು ದೃಶ್ಯದ ವಿನೂತನ ಪ್ರಯೋಗವನ್ನು ಒಳಗೊಂಡಿತ್ತು. ರಂಗದ ಮೇಲೆ ಬಿ.ವಿ. ಕಾರಂತರ ನಿರ್ದೇಶನದ ಯಶಸ್ವಿ ಪ್ರಯೋಗವಾಯಿತು.

ಶ್ರೀರಂಗರು ಬರೆದದ್ದು ಒಟ್ಟು 47 ಪೂರ್ಣಾವಧಿಯ ನಾಟಕಗಳು, 67 ಏಕಾಂಕಗಳು, ಅನೇಕ ಬಾನುಲಿ ನಾಟಕಗಳು, 13 ಕಾದಂಬರಿ, ಅಸಂಖ್ಯ ರಂಗ ವಿಚಾರ ಹರಟೆಗಳು, ಕಾವ್ಯ, ಪ್ರವಾಸ ಕಥನ, ಆತ್ಮ ಚರಿತ್ರೆ, ಜೀವನ ಚರಿತ್ರೆ, ವಿಮರ್ಶಾ ಕೃತಿಗಳು, ವಿಚಾರ ಪ್ರಚೋದಕ, ಮಹತ್ವಪೂರ್ಣ ಗೀತಾ ಗಾಂಭೀರ್ಯ, ಗೀತಾ ದರ್ಪಣ, ಕನ್ನಡ ಹಾಗೂ ಇಂಗ್ಲಿಷಿನಲ್ಲಿ ಬರೆದ ಭರತನ ನಾಟ್ಯಶಾಸ್ತ್ರ, ಭಾಷಾ ವಿಜ್ಞಾನದ ಮೇಲಿನ ಗ್ರಂಥಗಳು. ಈ ರೀತಿ ವಿವಿಧ ಆಯಾಮದ ಇವರ ಸಾಹಿತ್ಯದ ಸೇವೆ ಅನುಪಮ, ಅವರ್ಣನೀಯ. ಅವರದು ದೈತ್ಯ ಪ್ರತಿಭೆ. ಎಲ್ಲಾ ಅವರಿಗೆ ಅವರೇ ಹೋಲಿಕೆ.

ಈ ಎಲ್ಲಾ ಗದ್ದಲಗಳ ನಡುವೆ ತಮ್ಮ ಬರಹ ಬದುಕುಗಳ ಸಂಸಾರ ನಡೆಸಿದ ಸಾಮಾನ್ಯ ಭಾರತ ಪುತ್ರ, ಜಾಗತಿಕ ಮೇಧಾವಿ, ಅವರ ಪಾದಕಮಲಗಳಿಗೆ ಶತಶತ ನಮನಗಳು.

**ಗ್ರಂಥ ಋಣ**


1. ಆಧುನಿಕ ಕನ್ನಡ ಸಾಹಿತ್ಯದ ವಿರಾಟ ಪುರುಷ: ಜಿಎಸ್ ಆಮೂರ್
2. ಶ್ರೀರಂಗಸಂಪದ: ಸಂ. ಎಚ್ ವಿ ವೆಂಕಟಸುಬ್ಬಯ್ಯ
3. ಶ್ರೀರಂಗ: ಎನ್ ಕೆ ಕುಲಕರ್ಣಿ
4. ಶ್ರೀರಂಗ ಸಂಪುಟ ಆಯ್ದ ನಾಟಕಗಳು: ಕರ್ನಾಟಕ ಸರ್ಕಾರ
5. ಶ್ರೀರಂಗ ಸಾರಸ್ವತ
6. ಸಾಹಿತಿಯ ಆತ್ಮ ಜಿಜ್ಞಾಸೆ
7. ಶ್ರೀರಂಗರೊಂದಿಗೆ 50 ವರ್ಷ: ಶಾರದಾ ಆಧ್ಯ


---

# Matrimonial

Alliance Invited for a Smarta, Kannada Brahmin boy, DOB: 27th May 1992, Gotra: Kashyapa, Rashi: Meena, Nakshatra: Uttarabhadra, Qualification: B.E. Production VJTI- Mumbai working at Easyserve Marketing, Operation Head in Mumbai.
Contact: Mrs. Sriprabha Sathyanarayana
Contact No.: 9870494853

**********

Alliance invited for a Vokkaliga Kannada Girl DOB: 30.05.1990, Time:4.10 p.m., Place: Thane, Qualification: B.E. (arch) M.S. (Construction Project Management) Oxford University, U.K., Subcaste: Hosadevaru – Vokkaliga.

Contact: Mr. M. Muniraja
Contact No.: 9323725260
Email ID: rajamuni54@yahoo.co.in

******

Alliance invited for a Stanika kannada Girl DOB: 23.02.1996 Time: 2.10a.m. Place: Mumbai, Nakshatra: Ashwini, Rashi: Mesha, Gotra: Angirasa, Height:5ft 7inches, Caste: Stanika Brahmin, Working Location: MNC Company in Mumbai.
Contact: Mrs. Hema Rao
Contact No.: 9850803518
Email Id: hemarao01@gmail.com

# ಮುಂಬೈ ವಿವಿ ಕನ್ನಡ ವಿಭಾಗ ಮತ್ತು ಮೈಸೂರು ಅಸೋಸಿಯೇಷನ್ ಮುಂಬಯಿ: ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ -2023

### ಔಚಿತ್ಯವು ಸಂಪೂರ್ಣ ಸೌಂದರ್ಯಕ್ಕೆ ಹೇತುವಾಗುತ್ತದೆ: ಡಾ. ಟಿ. ಎಸ್. ಸತ್ಯವತಿ.

ಭಾರತದ ಭವ್ಯ ಪರಂಪರೆಯಲ್ಲಿ ಸಮೃದ್ಧವಾದ ಜ್ಞಾನವಿದೆ. ನಾದ, ಲಯಗಳೆಂಬ ಸಂಗೀತದ ಮೂಲ ಘಟಕಗಳೊಂದಿಗೆ ಸಾಹಿತ್ಯವೂ ಮಧುರವಾದ ಸಂಬಂಧವನ್ನು ಹೊಂದಿದೆ. ಮೌಲ್ಯಯುತವಾದ ಸಂಗೀತ ಸಂಸ್ಕೃತಿ ನಮ್ಮಲ್ಲಿ ಅನಾದಿಯಿಂದಲೂ ಬೆಳೆದು ಬಂದಿದೆ. ನಮ್ಮ ಪೂರ್ವ ಸೂರಿಗಳು ಬಹಳ ಹಿಂದೆಯೇ ಆಳವಾಗಿ ಎಲ್ಲವನ್ನೂ ಅರ್ಥೈಸಿದ್ದಾರೆ. ಸಂಗೀತದಲ್ಲಿ ಸಂಶೋಧನೆ ನಡೆಸಲು ಇಂದು ಯಾವುದೂ ಉಳಿದಿಲ್ಲ. ಶಾಸ್ತ್ರಕಾರರು ಯಾವುದೇ ಕಲೆಯಲ್ಲಿ ಭಾವುಕ, ರಂಜಕ, ಶಿಕ್ಷಕ ಮತ್ತು ಕೂಟಕಾರ ಎಂಬ ನಾಲ್ಕು ವಿಧದವರನ್ನು ಗುರುತಿಸಿದ್ದಾರೆ. ಕಲೆಯಲ್ಲಿ ಈ ನಾಲ್ಕು ಗುಣಗಳೊಂದಿಗೆ 'ಕಾಕು' (ಘನ, ನಯ ಈ ಎರಡರ ಸಮ್ಮಿಶ್ರಣವನ್ನು ಹದವಾಗಿಸಬಹುದಾದ ಕೌಶಲ್ಯ) ಔಚಿತ್ಯಪೂರ್ಣವಾಗಿ ಹೊಂದಿಕೊಂಡರೆ ಅದು ಶ್ರೇಷ್ಠವೆನಿಸಿಕೊಳ್ಳುತ್ತದೆ. ಯಾವಾಗ ಎಲ್ಲಿ ಏನು ಯಾಕೆ ಹೇಗೆ ಮತ್ತು ಎಷ್ಟು ಬಳಸಬೇಕೆಂಬುದನ್ನು ತಿಳಿದಿರುವುದೇ ಔಚಿತ್ಯ. ಇದು ಸಂಗೀತಕ್ಕೆ ಮಾತ್ರವಲ್ಲ, ಜೀವನಕ್ಕೂ ಅನ್ವಯವಾಗುತ್ತದೆ. ಔಚಿತ್ಯವು ಸಂಪೂರ್ಣ ಸೌಂದರ್ಯಕ್ಕೆ ಹೇತುವಾಗುತ್ತದೆ ಎಂದು ಸಂಗೀತ ಮತ್ತು ಸಂಸ್ಕೃತ ವಿದ್ವಾಂಸರಾದ ವಿದುಷಿ ಡಾ. ಟಿ. ಎಸ್. ಸತ್ಯವತಿ ಅವರು ಅಭಿಪ್ರಾಯ ಪಟ್ಟರು.




ಅವರು ಫೆ. 4, 5ರಂದು ಮುಂಬೈ ವಿಶ್ವವಿದ್ಯಾಲಯ, ಕನ್ನಡ ವಿಭಾಗ ಹಾಗೂ ಮೈಸೂರು ಅಸೋಸಿಯೇಷನ್ ಮುಂಬಯಿ ಇದರ ಸಂಯುಕ್ತ ಆಶ್ರಯದಲ್ಲಿ, ಮೈಸೂರು ಅಸೋಸಿಯೇಷನ್ ಮಾಟುಂಗದ ಕಿರು ಸಭಾಗೃಹದಲ್ಲಿ ನಡೆದ ಮೈಸೂರು ಅಸೋಸಿಯೇಷನ್ ಬಂಗಾರ ಹಬ್ಬದ ದತ್ತಿ ಉಪನ್ಯಾಸ- 2023 ಕಾರ್ಯಕ್ರಮದಲ್ಲಿ 'ಭಾರತೀಯ ಸಂಗೀತದ ಬೇರು, ಬೆಳವಣಿಗೆ ಮತ್ತು ಮೂಲ ಗುರಿ ' ವಿಷಯದ ಕುರಿತು ಜಂಟಿ ಉಪನ್ಯಾಸ ನೀಡಿದರು.

ಭಾವುಕ ತನ್ನ ಸಂಗೀತವನ್ನು ಸ್ವತಃ ಆನಂದಿಸುತ್ತಾನೆ. ರಂಜಕನು ಅದನ್ನು ಸಹೃದಯರಿಗೆ ಹಂಚುವುದರಲ್ಲಿ ನಿಪುಣನಾಗಿರುತ್ತಾನೆ. (ರಂಜಕತ್ವ).

ಶಿಕ್ಷಕನಾದವನು ತನ್ನ ಚಿಂತನೆಗಳ ಬಗ್ಗೆ ದೃಢತೆಯಿಂದ ಅಧಿಕಾರಯುತವಾಗಿ ಹೇಳುತ್ತಾನೆ. ಇಂತಹ ಶಿಕ್ಷಕತ್ವ ಎಲ್ಲ ಬಗೆಯ ಜ್ಞಾನ ಪಡೆಯಲು ಅವಶ್ಯವಾಗಿ ಬೇಕು.

ಕೂಟಕಾರನು ಸರಿಯಾದುದನ್ನು ಅನುಕರಣೆ ಮಾಡಬಲ್ಲವನಾಗಿರುತ್ತಾನೆ. 'ಅತಿ ಸರ್ವತ್ರ ವರ್ಜಯೇತ್' ಎಂಬ ಉಕ್ತಿಯನ್ನು ಈ ನಾಲ್ಕೂ ಬಗೆಯವರು ಪಾಲಿಸಬೇಕು ಎಂಬುದನ್ನು ಅರ್ಥೈಸಿದರು.

ಬದುಕನ್ನು ಅರ್ಥಪೂರ್ಣವಾಗಿ ಆನಂದಿಸುವಲ್ಲಿ ಸಂಗೀತ ಮುಖ್ಯಪಾತ್ರವನ್ನು ವಹಿಸುತ್ತದೆ. ಏಕೆಂದರೆ ಇದು ಸಾರ್ವತ್ರಿಕವಾಗಿ ಎಲ್ಲರನ್ನೂ ಬಹಳ ಬೇಗ ತಲುಪುತ್ತದೆ. ಭಾರತೀಯ ಸಂಸ್ಕೃತಿಯೆಂಬ ಸಂಪದ್ಭರಿತವಾದ ಮಣ್ಣಿನಲ್ಲಿ ಒಂದು ಬೃಹತ್ ವೃಕ್ಷವಾಗಿ ಸಂಗೀತ ಬೆಳೆದು ನಿಂತಿದೆ. ಭಾರತದಲ್ಲಿ ಸಂಸ್ಕೃತಿಯ ಬೇರುಗಳು ಭದ್ರವಾಗಿ ನೆಲೆಯೂರಿ ಅದರ ಶಾಖೆಗಳು ವಿಶಾಲವಾಗಿ ಹರಡಿವೆ. 'ಆನೋ ಭದ್ರಾಃ ಕೃತವೋ ಯಂತು ವಿಶ್ವತಃ' - ವಿಶ್ವದೆಲ್ಲೆಡೆಯಿಂದ ಜ್ಞಾನದ ಬೆಳಕು ಹರಿದು ಬರಲಿ ಎಂಬ ನಮ್ಮ ಋಷಿ ಮುನಿಗಳ ಮಾತಿನಂತೇ ನಮ್ಮ ಸ್ವಂತಿಕೆಯನ್ನು ಕಾಪಾಡಿಕೊಂಡು ನಾವು ಎಲ್ಲವನ್ನೂ ಸ್ವೀಕರಿಸಿದ್ದೇವೆ. ಪ್ರಪಂಚದ ಎಲ್ಲ ಬಗೆಯ ಸಂಗೀತಗಳಲ್ಲಿ ಅತ್ಯಂತ ಪರಿಷ್ಕೃತ ರೂಪವಾಗಿರುವುದು ಭಾರತೀಯ ಶಾಸ್ತ್ರೀಯ ಸಂಗೀತ. ಜನಜೀವನದಲ್ಲಿ ಹಾಸು ಹೊಕ್ಕಾಗಿ ವೈವಿಧ್ಯಮಯವಾದ ಸಂಗೀತ ಸಿಗುವುದು ಭಾರತದಲ್ಲಿ ಮಾತ್ರ. ಈಗ ಸಂಗೀತದಲ್ಲಿ ಬದಲಾವಣೆಗಳಾಗಿವೆಯೇ ವಿನಃ ಹೊಚ್ಚ ಹೊಸತೆನ್ನುವುದು ಏನೂ ಇಲ್ಲ. ನಾವು ಮೂಲದಲ್ಲಿರುವ ಯಾವುದನ್ನು ಮರೆಯುವ ಹಾಗಿಲ್ಲ. ಏಕೆಂದರೆ ಅವೆಲ್ಲಕ್ಕೂ ನಿಖರವಾದ ಅರ್ಥಗಳಿವೆ. ಇದನ್ನು ತಿಳಿಯುವುದು ಮುಖ್ಯ. ಬಹಳ ಹಿಂದೆಯೇ ಭಾರತೀಯ ಸಂಗೀತದಲ್ಲಿ ಗರಿಷ್ಠ ಮಟ್ಟದ ಕೃಷಿಯನ್ನು ಮಾಡಲಾಗಿದೆ. ನಾವು ಅದನ್ನು ಮನವರಿಕೆ ಮಾಡಿಕೊಳ್ಳಲು ಮತ್ತೆ ಮತ್ತೆ ಹಿಂದೆ ಹೋಗಬೇಕು. ಏಕೆಂದರೆ ಒಂದು ಗಾನದ ಮೂಲಕ ಸಾಹಿತ್ಯವನ್ನು ವಿಸ್ತರಿಸುವಾಗ ಪುನಃಪುನಃ ಆ ಸಾಹಿತ್ಯದ ಪಲ್ಲವಿಗೆ ಬರಬೇಕಾಗುತ್ತದೆ. ಏಕೆಂದರೆ ಸಾಹಿತ್ಯದ ಸಾರವಿರುವುದು ಪಲ್ಲವಿಯಲ್ಲೇ. ಮುಂದಿನ ಭಾಗ ಅದರದ್ದೇ ವಿವರಣೆಯಾಗಿರುತ್ತದೆ.

ಕೈಲಾಸ ನಗವನ್ನು ಕಾಣಿಸುವ ಒಂದೇ ಒಂದು ಕಲೆಯೆಂದರೆ ಅದು ಗಾನ ಸರಸ್ವತಿ.

ತಥಾ ನಯತಿ ಕೈಲಾಸಂ ನ ಗಂಗಾ ನ ಸರಸ್ವತಿ

ಯಥಾ ನಯತಿ ಕೈಲಾಸಂ ನಗಂ ಗಾನ ಸರಸ್ವತಿ. ಇದು ಗಾನದ ಸ್ವಾರಸ್ಯವನ್ನು ಹೇಳುವ ಚಮತ್ಕಾರ ಶ್ಲೋಕ. ಕೈಲಾಸದಲ್ಲೇ ಹುಟ್ಟಿದ ಗಂಗೆಯಾಗಲಿ ಸರಸ್ವತಿಯಾಗಲಿ ನಮ್ಮನ್ನು ಕೈಲಾಸಕ್ಕೆ ಒಯ್ಯಲಾರರು. ಆದರೆ ಆ ಕೈಲಾಸ ನಗ(ಪರ್ವತ)ವನ್ನು ಕಾಣಿಸುವ ಒಂದೇ ಒಂದು ಕಲೆಯೆಂದರೆ ಅದು ಗಾನ ಸರಸ್ವತಿ. ಸಂಗೀತ ಸಾಗರದಲ್ಲಿ ಧುಮುಕಿದ

ಸ್ವತಃ ಸರಸ್ವತಿಯೂ ಅದರ ಇನ್ನೊಂದು ತುದಿಯನ್ನು ತಲುಪಲಾಗದೇ ಇನ್ನೇನು ಮುಳುಗಬಾರದೆಂದು ವೀಣೆಯನ್ನೇ ಎದದೆಗವಚಿಕೊಂಡಳಂತೆ. ಇಲ್ಲಿ ವೀಣೆ ಅರ್ಥಾತ್ ಸಂಗೀತ ನಮಗೆ ಅರಿವಿಲ್ಲದಷ್ಟು ಅಪಾರವಾದದ್ದು. ಎಂಬುದಾಗಿ ಸಂಗೀತದ ಮಹತ್ವವನ್ನು ಅವರು ಅರ್ಥೈಸಿದರು. ಇಂದಿನ ಸಂಗೀತ ಅನಾದಿಯಾಗಿದೆ. ಪಂಚಭೂತಗಳಲ್ಲಿನ ಅಂತಿಮ ತತ್ವವಾದ ಆಕಾಶದಲ್ಲಿ ಇರುವ ಶಬ್ದ ಧ್ವನಿಯಾಗಿ ಹುಟ್ಟಿಕೊಂಡಿದೆ. ಖಂಡವಾದ ಶಬ್ದವು ಅಖಂಡವಾದಾಗ ಹಾಗೂ ಮಧುರವಾದಾಗ ಅದು ನಾದ. ಇಲ್ಲವಾದರೆ ಅದು ಶಬ್ದವಾಗಿ ಮಾತ್ರ ಉಳಿಯುವಂತದ್ದು. ಎಲ್ಲವೂ ಧ್ವನಿಯಿಂದಲೇ ಆವರಿಸಲ್ಪಟ್ಟಿದೆ ಎನ್ನುವುದನ್ನು ಋಷಿ "ಧ್ವನಿರ್ಯೋನಿಃ ಪರಾಜ್ಞೇಯ ಧ್ವನಿಃ ಸರ್ವಸ್ಯಕಾರಣಂ; ಆಕ್ರಾಂತಂ ಧ್ವನಿನಾ ಸರ್ವಂ ಜಗತ್ ಸ್ಥಾವರ ಜಂಗಮಮ್" ಎಂದಿದ್ದಾನೆ. ಈ ಒಂದು ಅವ್ಯಕ್ತವಾದ ಅಮೂರ್ತವಾದ ಧ್ವನಿ ಮೂರ್ತವಾಗಬೇಕು. ವೇದ ಮಂತ್ರಗಳು 'ದೃಷ್ಟಾರರು' ಎಂದು ಕರೆಯಲ್ಪಡುವ ಮನುಷ್ಯರಿಗೆ ಹೊಳೆದದ್ದೇ ಹೊರತು ಅವರಿಂದ ಪ್ರಯತ್ನ ಪೂರ್ವಕವಾಗಿ ರಚನೆಯಾದದ್ದಲ್ಲ. ಅವರು ಅದನ್ನು ತಮ್ಮ ಅಂತಃಪ್ರ ಜ್ಞೆಯಿಂದ ಹಿಡಿದುಕೊಂಡು ನಮಗೆ ಕೊಟ್ಟಿರುವಂಥದ್ದು. "ತಥೋ ಬಿಂದುಃ ಸ್ತಥೋ ನಾದಃಸ್ತತೋ ಮಾತ್ರಾಃ ಸ್ವನುಕ್ರಮಾತ್". ಬಿಂದು, ನಾದ, ಮಾತ್ರೆಗಳು, ನಂತರ ಪದಗಳು, ವಾಕ್ಯಗಳು, ಮಹಾ ವಾಕ್ಯ. ಹೀಗೆ ಅದರ ಅರ್ಥ ವ್ಯಾಪ್ತಿಯೂ ಅಷ್ಟೇ ದೊಡ್ಡದು. ನಾದದ ವ್ಯಾಪ್ತಿಯೂ ಅಷ್ಟೇ ದೊಡ್ಡದು. "ಯೋನಾದಃ ಸರ್ವ ಭೂತನಾಂ ಸರ್ವ ವರ್ಣಸ್ಯಚ ಅಂಕುರಃ ಯೋ ಬೀಜಂ ಮಂತ್ರಕೋಟಿನಾಂ ತಂ ನಿತ್ಯಂ ಪ್ರಣಮಾಮ್ಯಹಂ". ಈ ನಾದಕ್ಕೆ ಸಾವಿಲ್ಲ. ಇದೇ ನಿತ್ಯ ಇದೇ ಓಂಕಾರ ಇದೇ ಪ್ರಣವ ಇದೇ ಆದಿ. ಇದರಿಂದಲೇ ಇಡೀ ಜಗತ್ತು. ಇದರಿಂದಲೇ ಮಾತು. ಅದಕ್ಕಾಗಿ "ಸಂಗೀತಾಮಪಿ ಸಾಹಿತ್ಯಂ ಸರಸ್ವತ್ಯಂ ಸ್ತನದ್ವಯಂ" ಎಂದಿದ್ದಾರೆ. ಎಲ್ಲದಕ್ಕೂ ಒಂದೇ ಒಂದು ಮೂಲ ಆಕರ. ಸಂಗೀತದ ಮೂಲ ವೇದ ಎನ್ನಬಹುದು. ಅದರ ಬೆಳವಣಿಗೆ ಎಂದರೆ ಸಹಸ್ರ ಮುಖವಾಗಿ ಒಂದೊಂದು ಅಂಶವನ್ನು ತೆಗೆದುಕೊಂಡು ಬೆಳೆಸಿರುವಂಥದ್ದು. ಅದರ ಮೂಲ ಗುರಿ ಆರಂಭದಲ್ಲಿ ವಿನೋದ, ನಂತರ ವಿಕಾಸ- ಆತ್ಮ ವಿಕಾಸ, ಮನೋವಿಕಾಸ, ಚಿತ್ತ ವಿಕಾಸ ಎಂಬುದನ್ನು ಅವರು ಸ್ಪಷ್ಟಪಡಿಸಿದರು. ಇದೇ ಸಂದರ್ಭದಲ್ಲಿ ಅವರು ಸಂಗೀತದಲ್ಲಿ ಸರಿ ಗಮ ಪಧ ನಿ ಸ್ವರಗಳನ್ನೇ ಆಯ್ಕೆ ಮಾಡಿಕೊಂಡು ಅದೇ ಕ್ರಮದಲ್ಲಿ ಜೋಡಿಸಿರುವುದರ ಹಿಂದೆ ಒಂದು ಚಲನೆಯಿದೆ ಎಂಬುದರ ಬಗ್ಗೆ ತನ್ನದೇ ಆದ ಕೆಲವು ವಿಚಾರಗಳನ್ನು ಹಂಚಿಕೊಂಡರು.

12ನೆಯ ಶತಮಾನದಲ್ಲಿ ಸೋಮೇಶ್ವರನಿಂದ ರಚಿತವಾದ ವಿಶ್ವಕೋಶ 'ಮಾನಸೋಲ್ಲಾಸ'ವು 100 ಅಧ್ಯಾಯಗಳನ್ನು ಒಳಗೊಂಡಿದ್ದು ಐದು ವಿಭಾಗ ಹಾಗೂ 20 ಉಪ ವಿಭಾಗಗಳಲ್ಲಿ ವಿಂಶತಿ ಎಂದು ಕರೆಯಲ್ಪಡುತ್ತದೆ. ಈ ಐದು ವಿಂಶತಿಗಳಲ್ಲಿ ಉಪಾಂತ್ಯ ವಿಂಶತಿಯಾದ ವಿನೋದ ವಿಂಶತಿಯು ಹೇಗೆ ವಿನೋದದಿಂದ ವಿಕಾಸದತ್ತ ಸಾಗಿದೆ ಎನ್ನುತ್ತಾ ಅದರ ಪ್ರಸ್ತುತತೆಯ ಕುರಿತು ಮಾತನಾಡಿದರು. ಮಾನಸೋಲ್ಲಾಸದಲ್ಲಿ ಜಗತ್ತಿನ ಒಳಿತು ಕೆಡುಕುಗಳಿಗೆ ಹೊಣೆಗಾರನಾದ ರಾಜ (ನಾಯಕ)ನನ್ನು ಉದ್ದೇಶಿಸಿ ಹೇಳಲಾಗಿದೆ. ವಿನೋದವನ್ನು ನೀಡುವ ನಾಯಕನಿಗೆ ಇರಬೇಕಾದ ಅರ್ಹತೆಗಳು, ಸಂಗೀತ ಸಭೆಯ ವರ್ಣನೆ, ಅರ್ಹ, ಸಭ್ಯ, ಮುಕ್ತ ಮನಸ್ಸಿನ ಶ್ರೋತೃಗಳು, ಗಾಯಕ ಲಕ್ಷಣಗಳು, ಸಂಗೀತ ರತ್ನಾಕರದಲ್ಲಿ ಹೇಳಿದ 25 ಗಾಯಕ ದೋಷಗಳು, ಗಾಯಕ, ವಾದಕರು ಆಸೀನವಾಗುವ ಕ್ರಮ, ಭಾವ ಬುದ್ಧಿಗಳ ಬೆರೆಯುವಿಕೆ, ಇವೆಲ್ಲವನ್ನೂ ಭಾರತೀಯ ಸಂಗೀತದ ಪರಿಕಲ್ಪನೆಯ ಅಡಿಯಲ್ಲಿ ವಿಷದವಾಗಿ ಚರ್ಚಿಸಿದರು. ಜನಪ್ರಿಯ ಸಂಗೀತ, ಕಲಾ ಸಂಗೀತದಲ್ಲಿ ಕಲ್ಪಿತ, ಕಲ್ಪನಾ ಸಂಗೀತಗಳ ಸರಿಯಾದ ರಚನೆಯನ್ನು ಒಳಗೊಂಡ ಸೃಜನಶೀಲ ಸಂಗೀತ, ಆಧ್ಯಾತ್ಮ ಸಂಗೀತ, ಭಕ್ತಿ ಸಂಗೀತ, ಎಂಬಿತ್ಯಾದಿ ಪರಿಕಲ್ಪನೆಗಳ ಲಕ್ಷಣಗಳನ್ನು ಸೋದಾಹರಣವಾಗಿ ವಿವರಿಸಿದರು. ಮಾನಸೋಲ್ಲಾಸಕಾರ ಸೋಮೇಶ್ವರ ಸಂಗೀತದ ಮನಃಶಾಸ್ತ್ರೀಯ ಒಳನೋಟಗಳನ್ನು ಕೊಟ್ಟ ಏಕೈಕ ಕವಿ. ಆತ ಅದರಲ್ಲಿ ಚರ್ಚಿಸಿದ ಅನಾಹತ ನಾದ, ಸ್ವರಗಳು, ಭಾವ, ರಸೋತ್ಪತ್ತಿ ಇವೆಲ್ಲ ಮುಖ್ಯ ಅಂಶಗಳನ್ನು ಪ್ರಸ್ತಾಪಿಸಿದರು. ಯಾವ ರೀತಿಯ ವ್ಯಕ್ತಿಗೆ ಯಾವ ರೀತಿಯ ಸಂಗೀತ ಅಪೇಕ್ಷಣೀಯ ಮತ್ತು ಆಪ್ತವಾದುದು, ಒಳ್ಳೆಯ ಗೀತೆ ಎಂದರೆ ಯಾವುದು, ಸಂಗೀತವು ಹೇಗೆ ಮನಸ್ಸನ್ನು ಶುದ್ಧೀಕರಿಸುವ ಕೆಲಸವನ್ನು ಮಾಡುತ್ತದೆ ಇಂತಹ ಕೆಲವು ಅಂಶಗಳ ಮೇಲೆ ಬೆಳಕು ಚೆಲ್ಲಿದರು. ಗಾಯಕ, ವಾದಕರು ಬಿಂದುವಿನಿಂದ ಸಿಂಧು ಆಗಬೇಕು. ಆತನಿಗೆ ಅಹಂಕಾರವಿರಬಾರದು, ಅಹಂಭಾವವಿರಬೇಕು. ಆಗ ಅದು 'ವಯಂ' ಭಾವವನ್ನು ಉಂಟುಮಾಡುತ್ತದೆ. ಅದಕ್ಕೆ ಪೂರಕವಾಗಿ ಡಿ. ವಿ ಗುಂಡಪ್ಪನವರು ಕಲೆಯ ಕಾರ್ಯದ ಕುರಿತಾಗಿ ಹೇಳಿರುವುದನ್ನು ಈ ಸಂದರ್ಭದಲ್ಲಿ ಅವರು ಉಲ್ಲೇಖಿಸಿದರು. ಸಂಗೀತ ಪರಿಕಲ್ಪನೆಗಳ ಸೌಂದರ್ಯವನ್ನು ಅರ್ಥವತ್ತಾಗಿ ತಿಳಿಯಪಡಿಸಿದರು. ಉಪನ್ಯಾಸದ ನಂತರದಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಜಿಜ್ಞಾಸುಗಳ ಪ್ರಶ್ನೆಗಳಿಗೆ ಸಮಂಜಸವಾಗಿ ನಿಖರವಾಗಿ ಉತ್ತರಿಸಿದರು. ಇದೇ ಸಂದರ್ಭದಲ್ಲಿ ಜಂಟಿ ಸಂಸ್ಥೆಗಳ ಪರವಾಗಿ ಡಾ ಟಿ. ಎಸ್. ಸತ್ಯವತಿ ಅವರನ್ನು ಗೌರವಿಸಲಾಯಿತು.

ಆರಂಭಿಕ ಉಪನ್ಯಾಸದಲ್ಲಿ ಪ್ರಾಸ್ತಾವಿಕ ನುಡಿಗಳನ್ನಾಡಿದ ಮುಂಬೈ ವಿಶ್ವವಿದ್ಯಾಲಯ ಕನ್ನಡ ವಿಭಾಗದ ಪ್ರಾಧ್ಯಾಪಕರು, ಮುಖ್ಯಸ್ಥರು ಆದ ಡಾ. ಜಿ. ಎನ್ ಉಪಾಧ್ಯ ಅವರು ಡಾ. ಸತ್ಯವತಿ ಅವರು ಸಂಗೀತ ಸಂಸ್ಕೃತ ಸರಸ್ವತಿ. ಇಂತಹ ಒಂದು ಘನ ವಿದ್ವಾಂಸರು ಆಗಮಿಸಿ ಉಪನ್ಯಾಸ ನೀಡುತ್ತಿರುವುದು ಸಂತೋಷವನ್ನು ನೀಡಿದೆ ಎಂದರು. ಮೈಸೂರು ಅಸೋಸಿಯೇಷನ್ ಇದು ಮುಂಬಯಿಯ ಪ್ರಮುಖ ಸಂಘ ಸಂಸ್ಥೆಗಳಲ್ಲಿ ಒಂದು. ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಕಲೆ ಹೀಗೆ ವಿಭಿನ್ನ ನಲೆಗಳಲ್ಲಿ ಕನ್ನಡದ ಬಲವರ್ಧನೆಗೆ ಅದು ಶ್ರಮಿಸುತ್ತಿದೆ. ಈಗ ಅದು ಶತಮಾನೋತ್ಸವದ ಹೊಸ್ತಿಲಲ್ಲಿದೆ. ಈ ಮಾಲಿಕೆಯ ಅಡಿಯಲ್ಲಿ ಹಲವು ಉಪನ್ಯಾಸಕರು ನೀಡಿದ ಉಪನ್ಯಾಸಗಳನ್ನು ಕೃತಿರೂಪದಲ್ಲಿ ತರುವ ಯೋಚನೆ ಇದ್ದು ಶತಮಾನೋತ್ಸವದ ಸಂದರ್ಭದಲ್ಲಿ ಅದನ್ನು ಪ್ರಕಟಿಸುವ ಯೋಜನೆ ಇದೆ ಎಂದು ನುಡಿದರು.

ಎರಡನೆಯ ಉಪನ್ಯಾಸದಲ್ಲಿ ಮೈಸೂರು ಅಸೋಸಿಯೇಷನ್ ನ ಡಾ. ಮಂಜುನಾಥ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ಸರಸ್ವತಿ ಎಂದರೆ ಜ್ಞಾನ. ಇಂದಿನ ದಿನಗಳಲ್ಲಿ ಒಂದಿಷ್ಟು ಪುಸ್ತಕಗಳನ್ನು ಜೋಡಿಸಿಟ್ಟು ಸರಸ್ವತಿಯನ್ನು ಪೂಜಿಸುತ್ತಾರೆ. ಅದರೊಂದಿಗೆ ಅದರಲ್ಲಿರುವ ವಿಷಯವನ್ನು ಅರಿತು ಪೂಜಿಸಿದರೆ ಅದಕ್ಕೆ ಅರ್ಥವಿದೆ. ಇಂದಿನ ದಿನಗಳಲ್ಲಿ ಸರ್ಕಸ್ ಸಂಗೀತ ಹಾಗೂ ಲಾಲಿತ್ಯವಿಲ್ಲದ ಶುಷ್ಕ ಸಾಹಿತ್ಯ ಬರುತ್ತಿರುವುದು ವಿಷಾದನೀಯ ಎಂದರು.

ಜಂಟಿ ಉಪನ್ಯಾಸ ಕಾರ್ಯಕ್ರಮವನ್ನು ಕ್ರಮವಾಗಿ ಶ್ರೀಮತಿ ಕಲಾ ಭಾಗ್ವತ್ ಹಾಗೂ ಶ್ರೀಮತಿ ಜ್ಯೋತಿ ಉಡುಪ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲಾಯಿತು. ಸಂಗೀತ ವಿದುಷಿ ಶ್ಯಾಮಲಾ ರಾಧೇಶ್ ಅವರು ಡಾ. ಸತ್ಯವತಿ ಅವರನ್ನು ಪರಿಚಯಿಸಿದರು. ಮುಂಬೈ ವಿವಿ ಕನ್ನಡ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಪೂರ್ಣಿಮಾ ಶೆಟ್ಟಿ ಹಾಗೂ ಮೈಸೂರು ಅಸೋಸಿಯೇಷನ್ ನ ಟ್ರಸ್ಟಿಗಳಾದ ಡಾ. ಮಂಜುನಾಥ್ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಡಾ. ಜಿ. ಎಸ್. ಶಂಕರಲಿಂಗ ಹಾಗೂ ಡಾ. ಜಿ. ಎನ್ ಉಪಾಧ್ಯ ಅವರು ವಂದನಾರ್ಪಣೆಗೈದರು. ವೇದಿಕೆಯಲ್ಲಿ ಡಾ. ಸತ್ಯವತಿ, ಮೈಸೂರು ಅಸೋಸಿಯೇಷನ್ ಮುಂಬಯಿ ಇದರ ಅಧ್ಯಕ್ಷರಾದ ಕೆ. ಕಮಲಾ, ಡಾ. ಉಪಾಧ್ಯ, ಕಾರ್ಯದರ್ಶಿ ಡಾ.ಜಿ. ಎಸ್. ಶಂಕರಲಿಂಗ ಉಪಸ್ಥಿತರಿದ್ದರು. ಮೈಸೂರು ಅಸೋಸಿಯೇಷನ್ ನ ಮಂಜುನಾಥಯ್ಯ, ಸಾಹಿತ್ಯ, ಸಂಗೀತಾಸಕ್ತರನೇಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ವರದಿ: ಕಲಾ ಭಾಗ್ವತ್ & ಸವಿತಾ ಅರುಣ ಶೆಟ್ಟಿ

---

## "ಶ್ರೀರಾಮಚರಿತಮಾನಸ"

✍ ವನಜಾರಾಜನ್

ಶ್ರೀಮದ್ ಗೋಸ್ವಾಮಿ ತುಲಸೀದಾಸರು ರಚಿಸಿದ "ಶ್ರೀರಾಮಚರಿತಮಾನಸವು" ಕೇವಲ ಹಿಂದಿ ಸಾಹಿತ್ಯದಲ್ಲಿಯೇ ಅಲ್ಲ, ಜಗತ್ತಿನ ಸಾಹಿತ್ಯದಲ್ಲಿಯೂ ಸಹ ವಿಶಿಷ್ಠ ಸ್ಥಾನವನ್ನು ಪಡೆದುಕೊಂಡಿದೆ. ಆದರ್ಶ ಗೃಹಜೀವನ, ಆದರ್ಶ ರಾಜಧರ್ಮ, ಆದರ್ಶ ಪಾರಿವಾರಿಕ ಜೀವನ, ಪಾತಿವ್ರತ್ಯ ಧರ್ಮ, ಆದರ್ಶ ಭ್ರಾತೃ ಧರ್ಮದ ಜೊತೆಗೆ ಭಕ್ತಿ ಜ್ಞಾನ, ತ್ಯಾಗ, ವೈರಾಗ್ಯ ಹಾಗೂ ಸದಾಚಾರದ ಶಿಕ್ಷಣ ನೀಡುವ ಗ್ರಂಥ "ಶ್ರೀರಾಮಚರಿತಮಾನಸ". ಗೃಹಸ್ಥರು, ಸನ್ಯಾಸಿಗಳು, ಸ್ತ್ರೀ ಪುರುಷರು, ಬಾಲಕರು, ವೃದ್ಧರು ಹೀಗೆ ಎಲ್ಲರೂ ಬಹಳ ಅಭಿರುಚಿಯಿಂದ ಓದುತ್ತಾರೆ, ಹಾಡುತ್ತಾರೆ ಮತ್ತು ಭಕ್ತಿಯಿಂದ ಕೇಳುತ್ತಾರೆ. ಭಗವಂತನ ಅನನ್ಯ ಭಕ್ತರಾದ ತುಲಸೀದಾಸರು, ಭಗವಂತನ ಪ್ರೇರಣೆಯಿಂದ ರಚಿಸಿದ ಅಲೌಕಿಕ ಗ್ರಂಥವಿದು! ಅವರು ಎರಡು ವರ್ಷ ಏಳು ತಿಂಗಳು ಇಪ್ಪತ್ತಾರು ದಿವಸಗಳಲ್ಲಿ ಈ ರಾಮಾಯಣದ "ಏಳು ಕಾಂಡ"ಗಳನ್ನು ಬರೆದು ಮುಗಿಸಿದರಂತೆ. ನಂತರ ಕಾಶಿಗೆ ಹೋಗಿ ಅಲ್ಲಿ ಭಗವಾನ್ ಶ್ರೀ ವಿಶ್ವನಾಥ ಮತ್ತು ಮಾತಾ ಅನ್ನಪೂರ್ಣ ಎದುರಿನಲ್ಲಿ "ಶ್ರೀರಾಮಚರಿತಮಾನಸ"ವನ್ನು ಭಕ್ತಿಪೂರ್ವಕವಾಗಿ ಅರ್ಪಿಸಿದರು. ಆ ರಾತ್ರಿ ಪುಸ್ತಕವನ್ನು ದೇವಸ್ಥಾನದಲ್ಲಿಯೇ ಇಡಲಾಗಿತ್ತು. ಬೆಳಿಗ್ಗೆ ಎಂದಿನಂತೆ ಅದನ್ನು ತೆರೆದಾಗ, ಅದರಲ್ಲಿ "ಸತ್ಯಂ ಶಿವಂ ಸುಂದರಂ" ಎಂದು ಬರೆಯಲಾಗಿತ್ತು. (ನೆನೆಸಿಕೊಂಡರೆ ರೋಮಾಂಚನವಾಗುತ್ತದೆ). ಅಷ್ಟೇ ಅಲ್ಲ, ಕೆಳಗಡೆ 'ಶಂಕರ'ನ ಸಹಿಯೂ ಇತ್ತು. ಎಂತಹ ಅಲೌಕಿಕ ಗ್ರಂಥ!

ಇಂದಿನ ಅಶಾಂತಿಯ ವಾತಾವರಣದ ಕಾಲದಲ್ಲಿ ಈ ಗ್ರಂಥದ ಭಾಗವಾದ "ಸುಂದರ" ಕಾಂಡದ ಪಠನ, ಮನನ, ಅನುಷ್ಠಾನ ತೀರ ಅಗತ್ಯವೆನಿಸಿದೆ. ಇದರಿಂದ ಸಮಾಜದಲ್ಲಿ ಸುಖ ಶಾಂತಿ ನೆಲೆಸಲು ಹಾಗೂ ಜನತೆ ಪರಸ್ಪರ ಅನ್ಯೋನ್ಯತೆಯಿಂದ ಬಾಳಲು ಭಗವಂತನ ಕೃಪೆ ದೊರೆಯಲು ಇದೊಂದೇ ಮಾರ್ಗ ಎಂದೆನಿಸಿದೆ.

"ಸುಂದರೇ ಸುಂದರೋ ರಾಮಃ ಸುಂದರೇ ಸುಂದರಃ ಕಪಿಃ|
ಸುಂದರೇ ಸುಂದರೀ ಸೀತಾ ಸುಂದರೇ ಕಿಂ ನ ಸುಂದರಮ್||

"ಶ್ರೀರಾಮಚರಿತಮಾನಸ"ದಲ್ಲಿ ತುಲಸೀದಾಸರು, ಸನ್ಯಾಸಿಯೆಂದರೆ ಹೀಗೆ ವರ್ಣಿಸುತ್ತಾರೆ. "ಹತ್ತಿಯ ಗಿಡ ಶುಭ್ರ, ಸ್ವಚ್ಛ, ಶ್ವೇತ ವರ್ಣದ ಹೂವು ನೀಡುತ್ತದೆ. ಬಿರಿದ ಹತ್ತಿಯ ಹೂಗಳನ್ನು ಹಿಂಜಿ, ಬೀಜ ಬೇರೆ ಮಾಡಿ ಚರಕಕ್ಕೆ ಹಾಕಿ, ಎಳೆದು ನೂಲು ತಯಾರಿಸಿ, ಅನಂತರ ಮಗ್ಗಕ್ಕೆ ಹಾಕಿ ಹೊಸೆದು ಬಟ್ಟೆ ತಯಾರಿಸುವಂತೆ ಸನ್ಯಾಸಿಯ ಜೀವನ".

ಐಹಿಕವೆಂಬ ಬೀಜ, ಆವರಣ ತ್ಯಜಿಸಿ ನಾನಾ ರೀತಿಯ ಕಠಿಣ ಪರೀಕ್ಷೆಗಳಿಗೆ ಒಡ್ಡಿಕೊಂಡು (ತಪಸ್ಸು) ಅವನು ವಸ್ತ್ರವಾಗಿ ಹೊರಬರಬೇಕು. ತನಗಾಗಿ ಮಾತ್ರವಲ್ಲ, ಸಮಾಜಕ್ಕಾಗಿಯೂ ಜೀವನ ಸವೆಸಬೇಕು. ಧರ್ಮಪಾಲನೆ, ರಕ್ಷಣೆ ಹಾಗೂ ಮಾರ್ಗದರ್ಶನ ಇವರ ತಪಸ್ಸಾಗಬೇಕು. ಯೋಚನೆ ಮಾಡಿ.....

# ಶ್ರೀರಂಗ ರಂಗೋತ್ಸವ – 2023

ಈ ವರ್ಷದ ಶ್ರೀರಂಗ ನಾಟಕೋತ್ಸವ ಶುಕ್ರವಾರ ಫೆಬ್ರುವರಿ 17ರ ಸಂಜೆ 6.30 ಕ್ಕೆ ಮೊದಲಾಯಿತು. ಮೊದಲಿಗೆ ಧಾರವಾಡದಿಂದ ಬಂದ ರಂಗ ತಜ್ಞ ಡಾ. ಹರ್ಷ ಡಂಬಲ್ ಅವರು ಶ್ರೀರಂಗರ ಬರಹಗಳ ಮೇಲೆ ಮಾತನಾಡಿ, ಅವರ ಸಾಹಿತ್ಯ ಸಾಧನೆ ಅಗಾಧ, ಕೇವಲ ನಾಟಕಗಳಲ್ಲದೆ, ಕಾದಂಬರಿಗಳು, ವಿಶ್ಲೇಷಣೆಗಳು ಅಂತೆಯೇ ವೈಚಾರಿಕ ಗ್ರಂಥಗಳತ್ತವೂ ಹರಡಿದೆ ಎಂದರು. ನಮ್ಮ ಇಂದಿನ ಸಮಾಜದ ಸಮಸ್ಯೆಗಳ ಬಗ್ಗೆಯೇ ಅವರ ನೋಟವಿತ್ತು. ಅವರಿಗೆ ಮಹಾತ್ಮ ಗಾಂಧಿಯವರ ಬಗ್ಗೆ ಅಪಾರ ಗೌರವವಿತ್ತು. ಗಾಂಧಿಯವರ ಮಾದರಿ ಇವರ ಜೀವನ ಅಂತೆಯೇ ರಾಷ್ಟ್ರ ಬೆಳವಿನ ದಾರಿಯಾಗಿತ್ತು ಎಂದು ಹೇಳಿದರು. ಹೌದು ಮೊದಲಿಗೆ ಅವರು ತಮ್ಮ ನಾಟಕಗಳನ್ನು ಆಡಲು ಯಾರಿಗೂ ಒಪ್ಪಿಗೆಯನ್ನು ನೀಡುತ್ತಿದ್ದಿಲ್ಲ, ರಿಹರ್ಸಲ್ ನಲ್ಲಿ ಬಂದು ಕೂತು ತಾವು ಬರೆದಂತೆಯೇ ಆಡುತ್ತಿದ್ದಾರೋ ಇಲ್ಲವೋ ನೋಡಿ ಆ ನಂತರ ಒಪ್ಪಿಗೆಯನ್ನು ನೀಡುತ್ತಿದ್ದರು. ಆದರೆ ಕಾಲಾಂತರದಲ್ಲಿ ಅವರ ಈ ನಿಲುವು ಮಾರ್ಪಾಡಾಯಿತು.




ಡಂಬಲ್ ಅವರ ತಿಳಿವಿನ ಮಾತುಗಳಲ್ಲಿ ಶ್ರೀರಂಗರು ಎದ್ದು ಮೂಡಿ ಬಂದರು.

**ಬಿದ್ದೂರಿನ ಬಿಗ್ ಬೆನ್:** ಬೆಂಗಳೂರಿನ ರಂಗ ಪಯಣ ತಂಡದವರು, ಬಿದ್ದೂರಿನ ಬಿಗ್ ಬೆನ್ ನಾಟಕವನ್ನಾಡಿದರು. ಇದೊಂದು ಪ್ರಹಸನ ನಾಟಕ. ಬೇರೆ ಒಂದು ಊರಿನಿಂದ ಬಂದು ಮತ್ತೆ ಬೆಳಿಗ್ಗೆಯೇ ಪ್ರಯಾಣ ಮಾಡಬೇಕಾದವರು ಒಬ್ಬರು, ತಮ್ಮ ಗೆಳೆಯನೊಬ್ಬ ಈ ಊರಿನಲ್ಲಿಯೇ ಇರುವುದನ್ನು ತಿಳಿದು, ಅವನನ್ನು ಹುಡುಕಿಕೊಂಡು ಹೋಗುತ್ತಾರೆ. ಬಹಳ ವರ್ಷಗಳ ಮೇಲೆ ಸೇರುತ್ತಿರುವ ಗೆಳೆಯರು ಬಹಳ ಕಾಲ ಮಾತನಾಡಿ ನಿದ್ದೆ ಹೋಗುತ್ತಾರೆ. ಬಿದ್ದೂರಿನ ಪಟೇಲರ ಮನೆಯ ಗಂಟೆ ಜೋರಾಗಿ ಬೆಳಿಗ್ಗೆ 6ಕ್ಕೆ ಹೊಡೆಯುವುದು ಎಂಬ ನಂಬಿಕೆಯಲ್ಲಿ ಬಂದವನಿಗೆ ಮೂಡಿಸುತ್ತಾನೆ. ಆದರೆ ನಿದ್ದೆಯ ನಡುವೆಯೇ ಕನಸಿನಿಂದ ಎದ್ದು ಬಡಬಡಿಕೆಯಲ್ಲಿ ಕಳೆದು, ಹಗಲು ಬಂದರೂ ಪಟೇಲರ ಮನೆಯ ಗಂಟೆ ಹೊಡೆಯುವುದೇ ಇಲ್ಲ.

ನಾಟಕದ ಒಟ್ಟಾರೆ ತೋರುವಿಕೆ, ಅಷ್ಟೇನೂ ಒಳಿತಾಗಿರಲಿಲ್ಲ. ಒಬ್ಬರ ಮೇಲೆ ಒಬ್ಬರು ಮಾತನಾಡುತ್ತಿದ್ದರಿಂದ, ಮಾತುಗಳೂ ನೋಡುಗರಿಗೆ ಸರಿಯಾಗಿ ಕೇಳಲಿಲ್ಲ. ಹಾಸ್ಯವೇ ಪ್ರಧಾನವಾದಾಗ, ಮಾತೇ ಪ್ರಧಾನವಾಗಿರುವುದರಿಂದ, ಮಾತು ಸ್ಪಷ್ಟವಾಗಿರಬೇಕು. ಪಕ್ಕದ ಸಂಗೀತ ಶ್ರೀ ರಾಜಗುರು ಅವರದ್ದು ಚೆನ್ನಾಗಿತ್ತು.

ಸಾಮ್ರಾಜ್ಯಂ: ಎರಡನೆಯ ದಿನದ ನಾಟಕ, ಅಭಿನಯ ತಂಡವದವರಿಂದ 'ಮರಾಠಿ ನಾಟಕ ಸಾಮ್ರಾಜ್ಯಂ". ಇದೊಂದು ವಿಚಾರಾತ್ಮಕ ನಾಟಕ. ರಾವಣ ಜ್ಞಾನಿ. ರಾಜ, ಅವನ ಮೊದಲ ಹೊಣೆಗಾರಿಕೆ ತನ್ನ 'ಸಾಮ್ರಾಜ್ಯ'ವನ್ನು ಕಾಪಾಡುವುದು. 'ಸಾಮ್ರಾಜ್ಯವೆಂದರೇನು? ಅದು ತನ್ನ ಹತ್ತಿರದ ಮನೆಯವರು ಮಾತ್ರವಲ್ಲದೆ, ಇಡೀ ರಾಜ್ಯದಲ್ಲಿರುವ ಜನತೆ. ರಾವಣ ತನ್ನ ಪರಿವಾರದ ದೂರುಗಳಿಗೇ ಹೆಚ್ಚು ಗಮನವಿತ್ತಾಗ ಅವನು "ಸಾಮ್ರಾಜ್ಯ"ದಿಂದ ದೂರವಾಗುತ್ತಾನೆ. ಶೂರ್ಪನಖಿಯೋ, ಇಲ್ಲವೇ ಬೇರೆಯವರಿಗೂ ಹೇಳಿದ ದೂರಿಗೋ ಹೆಚ್ಚು ಗಮನವಿತ್ತಾಗ ಅವನು ರಾಜನಾಗದೇ ಹೋಗುತ್ತಾನೆ.




ಸೀತೆ ಯಾವಾಗಲೂ ರಾಮ

ಧ್ಯಾನದಲ್ಲಿ ತೊಡಗಿದ್ದನ್ನು ಕಂಡು ಬೇರೆಯವರೂ ರಾಮಧ್ಯಾನ ಮೊದಲು ತೊಡಗುತ್ತಾರೆ. ಕಡೆಗೆ ನಾಟಕ "ಜೈ ಶ್ರೀರಾಮ್" ಕೂಗಿನಿಂದಲೇ ಮುಗಿಯುತ್ತದೆ. ನಾಟಕ ವಾಲ್ಮೀಕಿ ರಾಮಾಯಣವನ್ನು ಹೆಚ್ಚು ಅನುಸರಿಸಿಲ್ಲ, ತುಳಸಿ ರಾಮಾಯಣ ಹಾಗೂ ಮರಾಠಿ ರಾಮಾಯಣಗಳನ್ನು ಅನುಸರಿಸಿ ಬರೆದ ನಾಟಕ.



ಅಭಿನಯದ ಮಟ್ಟ ಹೆಚ್ಚಿನದು. ರಾವಣನ ಪಾತ್ರದಲ್ಲಿ ಅಭಿಜಿತ್ ಝುನ್ಝಾರಾವ್ ಅವರೇ ಅಭಿನಯಿಸಿ ಶೋಭಿಸಿದರು. ಭಾಷೆ ಕೂಡ ಅಷ್ಟೇನೂ ತೊಂದರೆಯಾಗಿರಲಿಲ್ಲ, ಸುಲಭವಾಗಿ ತಿಳಿಯಬಹುದಾಗಿತ್ತು.

ಬೂಟು ಬಂದೂಕುಗಳ ನಡುವೆ: ಕಡೆಯ ದಿನ ಭಾನುವಾರ, 19ರ ಸಂಜೆ ಶಿವಮೊಗ್ಗದ ಹೊಂಗಿರಣ ತಂಡ, ಡಾ. ಸಾಸ್ವೆಹಳ್ಳಿ ಸತೀಶ್ ಅವರ ನಿರ್ದೇಶನದಲ್ಲಿ ನಡೆದ ನಾಟಕ.

ಸ್ವಾತಂತ್ರ್ಯ ಪೂರ್ವದಲ್ಲಿ ಮಲೆನಾಡಿನಲ್ಲಿ ನಡೆದ ಪ್ರತಿಭಟನೆಯನ್ನು ಕುರಿತಾಗಿದೆ. ತಾಯಿಯೊಬ್ಬಳು, ಹಳ್ಳಿಯ ಎಲ್ಲರನ್ನೂ ಹುರಿದುಂಬಿಸಿ ಬ್ರಿಟಿಷರ ವಿರುದ್ಧ ಹೊಡೆದಾಡುವ ಕಥೆ. ತಿನಿಸು-ಚಾಯ್ ಅಂಗಡಿಯನ್ನು ಇಟ್ಟುಕೊಂಡು, ಹೊಡೆದಾಡುವ ಜನಕ್ಕೆ ಬಂದೂಕು-ಮದ್ದುಗುಂಡುಗಳನ್ನು ಒದಗಿಸುವ ಕೇಂದ್ರವಾಗಿ ನಿಂತಿರುವಾಕೆ. ಎಷ್ಟೋ ಬಾರಿ ಪೋಲಿಸರು ಇವಳ ಮನೆಯ ಮೇಲೆ ಕಣ್ಣಿಟ್ಟು ಹುಡುಕಾಡಿದರೂ ಕೂಡ ಇವಳು ಹೊಡೆದಾಟಕ್ಕೆ ಕುಮ್ಮಕ್ಕು ಕೊಡುವುದನ್ನು ನಿಲ್ಲಿಸುವುದಿಲ್ಲ. ಮಗ ಸೂರಪ್ಪನಿಗೆ ಅದೇ ಸ್ಫೂರ್ತಿಯನ್ನು ನೀಡಿ ಅವನನ್ನು ಹೊಡೆದಾಟದಲ್ಲಿ ತೊಡಗಿಸುತ್ತಾಳೆ. ಆದರೆ ಪೋಲಿಸರು ಒಂದು ದಿನ ಅವನನ್ನು ಗುಂಪಿನಿಂದ ಹೊಡೆದು ಹಾಕಿದರೂ ಕೂಡ ಇವಳು ಕುಗ್ಗದೆ, ಸ್ವಾತಂತ್ರ್ಯ ಬಾವುಟವನ್ನು ಹಾರಿಸುತ್ತಾ, ಹುಟ್ಟುವ ಮೊಮ್ಮಗನಿಗೆ ಮೊದಲೇ ದಾರಿಯಾಗುತ್ತಾಳೆ. ಈಕೆ ಏನೂ ಗಾಂಧೀವಾದಿಯಲ್ಲ. ಇದು ಸುಭಾಷ್ ಚಂದ್ರಬೋಸ್, ಭಗತ್ ಸಿಂಗ್, ಬಾಲ ಗಂಗಾಧರ್ ತಿಲಕ್ ಅವರ ಚಿಂತನೆಯನ್ನು ತೋರುವ ನಾಟಕ.



ನಾಟಕದ ವಸ್ತು, ಬ್ರೆಹ್ಟ್ ಅವರ "Mother Courage" ನಾಟಕದ ವಸ್ತುವಿನಂತೆಯೇ ಇದೆ.

ಅಭಿನಯ, ರಂಗವಿನ್ಯಾಸ ಚೆನ್ನಾಗಿತ್ತು. ಇದರಲ್ಲಿಯ ಕಲಾವಿದರಲ್ಲಿ ಪ್ರಾಧ್ಯಾಪಕರೇ ಹೆಚ್ಚಿದ್ದರಿಂದ ಇಂತಹ ಕಾದಾಡುವ ಮನೋಭಾವನೆಯನ್ನು ತಮ್ಮ ವಿದ್ಯಾರ್ಥಿಗಳಲ್ಲೂ ಮೂಡಿಸುತ್ತಾರೆಂದು ಆಶಿಸೋಣ. ಒಟ್ಟಾರೆ ಮೂರು ದಿನಗಳ ನಾಟಕಗಳು ಈ ಬಾರಿಯ ಶ್ರೀರಂಗ ರಂಗೋತ್ಸವಕ್ಕೆ ಹೆಚ್ಚಿನ ಕಳೆಯನ್ನು ಇತ್ತಿದ್ದವು.

ಈ ನಾಟಕೋತ್ಸವಕ್ಕೆ ಪ್ರಾಯೋಜಕರಾಗಿ ಸಹಯೋಜಕರಾಗಿ ದುಡಿದ ಡಾ. ಉಷಾ ದೇಸಾಯಿ ಮತ್ತು ಶ್ರೀ ದೇಸಾಯಿಯವರಿಗೆ ಮೈಸೂರು ಅಸೋಸಿಯೇಷನ್ ಋಣಿಯಾಗಿದೆ.

ಛಾಯಾಚಿತ್ರ : ಶ್ರೀ. ಎಚ್. ಆರ್. ಎಲ್. ವೆಂಕಟೇಶ್

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077